ಸಂಪುಟ 4 ಸಂಚಿಕೆ 2 ಮಾರ್ಚ್ 2011

India ECHOES
ONE WORLD ONE HUMANITY

ಶ್ರೀ ರಾಮಚಂದ್ರ ಮಿಷನ್®

## ಚೆನ್ನೈನಲ್ಲಿ ಪೊಂಗಲ್





ಪೊಂಗಲ್ ಹಬ್ಬದ ಸಮಯದಲ್ಲಿ ಮಣಪ್ಪಾಕ್ಕಂ ಆಶ್ರಮವು ಅಭ್ಯಾಸಿಗಳಿಂದ ತುಂಬಿತುಳುಕುತ್ತಿತ್ತು ಹಾಗೂ ಗುರುಗಳು ಭಾರತ ಮತ್ತು ಇತರ ರಾಷ್ಟ್ರಗಳ ಅನೇಕ ಅಭ್ಯಾಸಿಗಳ ವಿವಾಹವನ್ನು ನೆರವೇರಿಸಿದರು. ಮಣಪ್ಪಾಕ್ಕಂ ಹಾಗೂ ನಾಟ್ರಾಂಪಲ್ಲಿ ಅಶ್ರಮಗಳಲ್ಲಿ ಸುಮಾರು ಒಂದು ತಿಂಗಳ ಅವಧಿಯ ತರಬೇತಿಯನ್ನು ಮುಗಿಸಿಬಂದ ಪರಿಣಿತರಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು.ಅಭ್ಯಾಸಿಯೂ, ಪ್ರಸಿದ್ಧ ತಮಿಳು ಚಲನಚಿತ್ರ ನಿರ್ದೇಶಕರೂ ಆದ ಸಹೋದರ ಲಿಂಗುಸ್ವಾಮಿಯವರು ಅವರ ಚಲನಚಿತ್ರ ಸಿಬ್ಬಂದಿ0ಯೊಂದಿಗೆ ಕಾಟೇಜಿನಲ್ಲಿ ಗುರುಗಳ ಹಾಗೂ ಆಶ್ರಮದ ಸುತ್ತಮುತ್ತಲಿನ ಚಿತ್ರಿಕೆಗಳನ್ನು ಚಿತ್ರೀಕರಣ ಮಾಡಿಕೊಳ್ಳುತ್ತಿರುವುದನ್ನು ನೋಡಬಹುದಿತ್ತು.ಕೆಲವು ಚಿತ್ರಿಕೆಗಳನ್ನು ಗುರುಗಳು ಬಾಬೂಜಿ ಮಂಟಪದ ಬಳಿ ಅಭ್ಯಾಸಿಗಳನ್ನು ಕುರಿತು ಮಾತನಾಡುತ್ತಿರುವಾಗ ಸೆರೆಹಿಡಿಯಲಾಯಿತು.

ಜನವರಿ 13ರಂದು ಗುರುಗಳು ಕಾರ್ಯಕಾರಿ ಮಂಡಳಿಯ ಸಭೆಯನ್ನು ನಡೆಸಿದರು. ನಂತರ ಗುರುಗಳು ಅನೌಪಚಾರಿಕ ಸಂಭಾಷಣೆಯೊಂದರಲ್ಲಿ ಕಾರ್ಯನಿರ್ವಾಹಕರನ್ನು ಕುರಿತು ಸಂಸ್ಥೆಯ ಕೆಲಸಗಳನ್ನು ಕೈಗೊಳ್ಳುವ ಅಭ್ಯರ್ಥಿಗಳ ಸರಿಯಾದ ಆಯ್ಕೆಯ ಅವಶ್ಯಕತೆಯನ್ನು ಒತ್ತಿ ಹೇಳಿದರು. ಅವರೆಂದರು "ಬಾಬೂಜಿಯವರು ನನಗೆ ಹೇಳಿದ್ದಾರೆ, ನೀನು ಉತ್ತಮ ನಡತೆಯುಳ್ಳ ವಿದ್ಯಾವಂತರನ್ನು ಆಯ್ಕೆ ಮಾಡಬೇಕು ಮತ್ತು ಅವರಿಗೆ ಸಾಮರ್ಥ್ಯವನ್ನು ನಾನು ನೀಡುತ್ತೇನೆ."

ಜನವರಿ 15ರಂದು ಸುಮಾರು 4500 ಅಭ್ಯಾಸಿಗಳು ಹಾಗೂ 500 ಮಕ್ಕಳು ಬಾಬೂಜಿ ಮೆಮೋರಿಯಲ್ ಆಶ್ರಮದಲ್ಲಿ ಉಪಸ್ಥಿತರಿದ್ದರು. ಗುರುಗಳು ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟ ನಂತರ ಸಹೋದರ ಚಕ್ರಪಾಣಿಯವರು ಮನಮುಗ್ಧಗೊಳಿಸುವಂತಹ ಭಾಷಣವನ್ನು ನೀಡುತ್ತಾ ಗುರುಗಳ ಮೇಲಿರುವ ಪ್ರೇಮವನ್ನು ಪ್ರಕಟಪಡಿಸಿದರು.

16ರಂದು ಗುರುಗಳು ಗೋಮಾಳಕ್ಕೆ ತಮ್ಮ ಸಾಂಪ್ರದಾಯಿಕ ಭೇಟಿಯನ್ನು ನೀಡಿ ಆಶ್ರಮದ ಗೋವುಗಳನ್ನು, ಪಶುಸಂಗೋಪನೆ ಮಾಡುವವರು ಗೋವುಗಳನ್ನು ಅಲಂಕರಿಸಿ ಅವರ ಈ ಸಂಪತ್ತನ್ನು ಆಚರಿಸುವ ದಿನವಾದ 'ಮಾಟ್ಟು ಪೊಂಗಲ್'ದಿನದಂದು ಅಭಿನಂದಿಸಿದರು.

ಈ ಅವಧಿಯಲ್ಲಿ ಗುರುಗಳು ತಮ್ಮ ದೀರ್ಘಾಂತರದ ವಿದೇಶ ಪಯಣವಾದ ದುಬೈ ಪ್ರಯಣಕ್ಕೆ ತಯಾರಾಗುತ್ತಿದ್ದರು. ಜನವರಿ 19ರ ಬೆಳಗ್ಗೆ ಗುರುಗಳು ದುಬೈಗೆ ಹೊರಟರು.





## ದುಬೈ

### ಎಸ್.ಎಮ್.ಎಸ್.ಎಫ್. ಧ್ಯಾನ ಕೇಂದ್ರದ ಉದ್ಘಾಟನೆ, 21ನೇ ಜನವರಿ 2011

ಈ ಸಂಗತಿಯು ಮಧ್ಯ ಪ್ರಾಚ್ಯ ರಾಷ್ಟ್ರಗಳ ಇತಿಹಾಸದಲ್ಲಿಯೇ ಎಸ್.ಎಮ್.ಎಸ್.ಎಫ್ ನ ವರ್ಷಾನುಚರಿತೆಯಲ್ಲಿಯೇ ನೆನಪಿಡುವಂತಹುದಾಗಿದೆ. ಈ ಹಿಂದೆ 1994ರಲ್ಲಿ ಈ ವಲಯದಲ್ಲಿ ಮುಂದೆ ಎಂದಾದರೂ ಧ್ಯಾನ ಕೇಂದ್ರವು ಪ್ರಾರಂಭವು ಸಾಧ್ಯವೇ ಎಂಬ ಪ್ರಶ್ನೆಗೆ ಗುರುಗಳು "ನಿಮ್ಮ ಜನರು ಸರಿ0ಯಾಗಿ ಧ್ಯಾನ ಮಾಡಿದರೆ ಹಾಗೂ ಅದರಲ್ಲಿ ಶ್ರಮವಹಿಸಿದರೆ 'ಅವರ' ಕೃಪೆಯಿಂದ ಇದು ಸಾಧ್ಯ" ಎಂದು ಪ್ರತ್ಯುತ್ತರಿಸಿದ್ದರು. ಕಳೆದ 2 ದಶಕಗಳಲ್ಲಿ ಗುರುಗಳ ನಿರಂತರವಾದ ಗಮನ ಮತ್ತು ಅವರ ಭೇಟಿಗಳಿಂದ ಅವರ ಪ್ರೇಮ ಮತ್ತು ಮಾರ್ಗದರ್ಶನದ ಫಲವಾಗಿ ಇಂದು ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಸುಮಾರು 1500 ಅಭ್ಯಾಸಿಗಳು ಹಾಗೂ 100 ಪ್ರಶಿಕ್ಷಕರು ಅಭ್ಯಾಸ ಮಾಡುತ್ತಿದ್ದಾರೆ.

19ನೇ ಜನವರಿ 2011ರಂದು ಗುರುಗಳು ಹೃತ್ಪೂರ್ವಕ ಸ್ವಾಗತದೊಂದಿಗೆ ಬಂದಿಳಿದರು. ಆಗ ಮಧ್ಯಾಹ್ನದ ಭೋಜನದ ಸಮಯವಾಗಿದ್ದರೂ ಅವರನ್ನು ಬರಮಾಡಿಕೊಳ್ಳಲು ಬಂದಿದ್ದ ಅಭ್ಯಾಸಿಗಳಿಗೆ ಬೈಠಕವನ್ನು ಕೊಡಲು ನಿರ್ಧರಿಸಿದರು. 20ರಂದು ಇರಾನಿನ ಕ್ಲಬ್ಬಿನ ಸಭಾಂಗಣದಲ್ಲಿ ಗುರುಗಳು ಕೊನೆಯ ಸತ್ಸಂಗವನ್ನು ನಡೆಸಿಕೊಟ್ಟರು ಹಾಗೂ 6 ವರ್ಷಗಳ ಹಿಂದೆ ಮೊದಲನೇ ಬಾರಿಗೆ ಬೈಠಕವನ್ನು ನಡೆಸಿಕೊಟ್ಟದ್ದನ್ನು ನೆನಪಿಸಿಕೊಂಡರು. ನಂತರ ಅವರು ಇರಾನಿನ ಕ್ಲಬ್ಬಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಈ ಹಿಂದೆ ನಮಗೆ ನೀಡಿರುವ ಬೆಂಬಲದ ಮೆಚ್ಚುಗೆಯ ದ್ಯೋತಕವಾಗಿ ಸ್ಮರಣಾರ್ಥಗಳನ್ನು ನೀಡಿದರು.

ಹೊಸ ದುಬೈನಲ್ಲಿ ಬಹಳ ವೇಗವಾಗಿ ಬೆಳೆಯುತ್ತಿರುವ ಜುಮೆರಿಶ್ ಲೇಕ್ ಟವರ್ಸ್‌ನಲ್ಲಿರುವ ಕೇಂದ್ರವನ್ನು ಉದ್ಘಾಟಿಸಲು ಗುರುಗಳು 21ರಂದು ಬಂದಿಳಿದರು. ಆಶ್ರಮದ ಮಂಡಳಿಯ ಸದಸ್ಯರು ಹಾಗೂ ಯುಎಇಯ ಪ್ರಶಿಕ್ಷಕರು ಗುರುಗಳನ್ನು ಬರಮಾಡಿಕೊಂಡರು. ಧ್ಯಾನ ಕೇಂದ್ರವನ್ನು ಬಾಬೂಜಿಯವರಿಗೆ ಸಮರ್ಪಿಸಿ ಅವರ ಪ್ರತಿಮೆಯನ್ನು ಅನಾವರಣ ಮಾಡಿದರು. ಸುಮಾರು 1100 ಅಭ್ಯಾಸಿಗಳು ಮಹಡಿಯ

ಸಂಪುಟ 4 ಸಂಚಿಕೆ 2
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ
ಮಾರ್ಚ್ 2011



ಮೇಲೆ ತಾಳ್ಮೆಯಿಂದ ಕಾಯುತ್ತಾ, ಅನೇಕ ಪರದೆಗಳ ಮೇಲೆ ಬಿಂಬಿಸಿದ್ದ ನೇರ ಪ್ರಸಾರದಲ್ಲಿ ಗುರುಗಳು ಟೇಪ್ ಕತ್ತರಿಸಿದ ಹಾಗೂ ಪರದೆಯನ್ನು ಸರಿಸುತ್ತಾ ವೇದಿಕೆಯ ಹಿಂಭಾಗದ ಸುಂದರವಾದ ಚಿತ್ರವನ್ನು ಪ್ರಕಟಪಡಿಸಿದ ದೃಶ್ಯಗಳನ್ನು ವೀಕ್ಷಿಸುತ್ತಿದ್ದರು. ಗೋಡೆಗಳ ಮೇಲೆ ಅಲಂಕರಿಸಿದ್ದ ಸಹಜಮಾರ್ಗದ ಎಲ್ಲಾ ಗುರುಗಳ ಉಕ್ತಿಗಳನ್ನು ಗುರುಗಳು ವೀಕ್ಷಿಸಿದರು.


ಸತ್ಸಂಗದ ನಂತರ ಗುರುಗಳು, ಆಗ ತಾನೇ ಎಲ್ಲರೂ ಪಡೆದ ಬೈಠಕದ ಬಗ್ಗೆ ಬಹಳ ಹೇಳಬಹುದೆಂದರು. ಈ ಸಂತೋಷದ ಸುಸಂದರ್ಭದ ಗುರುತಿಗೆ ಅವರು ಈ ವಲ0ಯುಕ್ಕೆ ಭೇಟಿ ನೀಡಿದ್ದ ಚಿತ್ರಗಳುಳ್ಳ ಸ್ಮರಣ ಸಂಚಿಕೆ ಮತ್ತು ಇಲ್ಲಿ ನೀಡಲಾಗಿದ್ದ ಕೆಲ ಭಾಷಣಗಳ ಡಿವಿಡಿಗಳನ್ನು ಬಿಡುಗಡೆ ಮಾಡಿದರು.

ಅವರ ವಾಸ್ತವ್ಯದ ಅವಧಿಯುದ್ದಕ್ಕೂ ಗುರುಗಳು ಪಾಕಿಸ್ತಾನ್, ಕುವೈತ್, ಬಹ್ರೇನ್, ಒಮನ್, ಇರಾನ್, ಸೌದಿ, ಅಲ್ಜೀರಿಯಾ, ತುನೀಸಿ0ಯಾ ಮತ್ತು ಈಜಿಪ್ಟಿನ ಅಭ್ಯಾಸಿಗಳ ಪುಟ್ಟ ಪುಟ್ಟ ಗುಂಪುಗಳೊಡನಿದ್ದು ವಿಶೇಷವಾಗಿ ಗಮನವನ್ನಿತ್ತರು. ಈ ಸಮ0ಯುದಲ್ಲಿ ಗುರುಗಳು ತಮ್ಮ ಸ್ವಾಭಾವಿಕ, ವಿನೋದಪೂರ್ಣ ಆದರೂ ಗಂಭೀರವಾದ ರೀತಿಯಲ್ಲಿ ಕೆಲವು ಸಲಹೆಗಳನ್ನೂ ಹಾಗೂ ಉತ್ತೇಜನವನ್ನು ನೀಡುತ್ತಾ ಅಭ್ಯಾಸಿಗಳನ್ನು ತಮ್ಮೆಡೆಗೆ ಸೆಳೆದುಕೊಂಡರು. ಪಾಕಿಸ್ತಾನದ 20 ಅಭ್ಯಾಸಿಗಳೊಂದಿಗೆ ಗಣನೀಯ ಸಮ0ಯು ಕಳೆದರು. ಬಹಳಷ್ಟು ಜನರಿಗೆ ಗುರುಗಳೊಂದಿಗೆ ಅವರ ಭೌತಿಕ ಉಪಸ್ಥಿತಿ0ಯಲ್ಲಿ ಇರುವ ಪ್ರಥಮ ಅವಕಾಶವಿದಾಗಿತ್ತು.

ಕೆಲವೊಮ್ಮೆ ಗುರುಗಳು ಅಭ್ಯಾಸಿಗಳ ಮನೆಗಳಿಗೆ ಭೇಟಿನೀಡುತ್ತಾ, ಬ ೈಠಕಗಳನ್ನು ಕೊಡುತ್ತಾ ಅಥವಾ ವಿರಮಿಸುತ್ತಾ ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಮಾತನಾಡುತ್ತಾ ಅಥವಾ ತಮ್ಮ ಕೆಲವು ನೆನಪುಗಳನ್ನು ಹೇಳುತ್ತಾ ಅಭ್ಯಾಸಿಗಳ ಆಂತರ್ಯದಲ್ಲಿ ಕಿಡಿಗಳನ್ನೆಬ್ಬಿಸುತ್ತಿದ್ದರು  ಮತ್ತು ಅವರಿಗೆ ಮಾತ್ರ ಸಾಧ್ಯವಾಗುವ ಹಾಗೆ ಅವರ ಪ್ರೇಮಮ0ಯು ಉಪಸ್ಥಿತಿಯಿಂದ ಅಲ್ಲಿನ ವಾತಾವರಣ ಮತ್ತು ಜನರ ಹೃದಯ ಸ್ಪರ್ಶಿಸಿದರು.

ಮಾನವನ ಏಕತೆಗಾಗಿ ಧ್ಯಾನ ಕೇಂದ್ರವಾಗಿರುವ ಎಸ್ ಎಮ್ ಎಸ್ ಎಫ಼್ ನ ಈ ಹೊಸ ಸ್ಥಳವು ಯಾವುದೇ ಜಾತಿ, ಧರ್ಮ, ಹಿನ್ನೆಲೆಗಳ ಬೇಧವಿಲ್ಲದೆ ಎಲ್ಲರಿಂದಲೂ ಬಳಸಲ್ಪಡುವಂತಾಗಿ ನಮಗೆ ಹೇಳಿಕೊಟ್ಟಿರುವ ಹಾಗೆ ನಮ್ಮ ಮುಂದಿನ ಜನಾಂಗಕ್ಕೆ






ವೈಯಕ್ತಿಕ ಶಾಂತಿ ಮತ್ತು ಸಮಗ್ರ ಸೌಹಾರ್ದತೆಯನ್ನು ತರಲು ಎಲ್ಲರಿಂದಲೂ ಬಳಸಲ್ಪಡುವಂತಾಗಬೇಕು.

ಗುರುಗಳ ಕೆಲ ಅಣಿಮುತ್ತುಗಳು:

❖ ಬಾಬೂಜಿಯವರು ಹೇಳುತ್ತಿದ್ದರು "ಯಾವುದೂ ಕೂಡ ಅದು ಕಾಣುವಷ್ಟು ಸುಲಭವಲ್ಲ ಅಥವಾ ಅಂದುಕೊಂಡಷ್ಟು ಕಠಿಣವೂ ಆಗಿರುವುದಿಲ್ಲ, ಯಾವುದೂ ಅಷ್ಟೆ!"

❖ ಒಬ್ಬ ಸಹೋದರಿ0ಯು ಗುರುಗಳನ್ನು "ನನಗೆ ನಿಮ್ಮ ಸಹಾಯ ಬೇಕು" ಎಂದು ಕೇಳಿದರು. ಅದಕ್ಕೆ ಉತ್ತರಿಸುತ್ತಾ ಗುರುಗಳು "ನಮಗೆಲ್ಲರಿಗೂ ಸಹಾಯ ಬೇಕು. ನಾನು ನಿಮಗೆ ಸಹಾಯ ಮಾಡುತ್ತೇನೆ, ನೀವು ನನಗೆ ಸಹಾಯ ಮಾಡಬೇಕು, ನಾನು ನಿಮಗೆ ಸಹಾಯ ಮಾಡಬೇಕು ಮತ್ತು ನಾವು ಜೊತೆಯಲ್ಲಿ ಸಾಗುತ್ತೇವೆ. ನಾನು ತಮಾಷೆ ಮಾಡುತ್ತಿಲ್ಲ,ನಾನು ನಗುತ್ತಿದ್ದೇನೆ ಆದರೆ ಹಾಸ್ಯ ಮಾಡುತ್ತಿಲ್ಲ,ನಿಜವಾಗಿಯೂ ಹೇಳುತ್ತಿದ್ದೇನೆ.ನಾನು ನನ್ನ ಸಹಾಯದ ಬಗ್ಗೆ ವಚನ ನೀಡುತ್ತೇನೆ ಮತ್ತು ನೀವು ನಿಮ್ಮ ಸಹಾಯವನ್ನು ನನಗೆ ಕೊಡಬೇಕು".

❖ "ನಮ್ಮ ಕಾರ್ಯಾಗಾರಗಳು ಭೋದಪ್ರದವಾಗಿ0ಯೇ ಇರಬೇಕೆಂದೇನಿಲ್ಲ, ಅವು ಖಂಡಿತವಾಗಿ0ಯೂ ಸ್ಫೂರ್ತಿದಾಯಕವಾಗಿರಬೇಕು"

❖ ಈ ಪ್ರದೇಶದ ಜನರ ಜೀವನ ಶೈಲಿಯ ಬಗ್ಗೆ ಮಾತನಾಡುತ್ತಾ ಗುರುಗಳು "ಬದಲಾವಣೆಯು ಬರುತ್ತಿದೆ, ನಿಧಾನವಾಗಿ ಆದರೂ ಖಂಡಿತವಾಗಿ ಬರುತ್ತಿದೆ....ಅದಕ್ಕಾಗಿ ತಾಳ್ಮೆ ಮತ್ತು ಪ್ರಾರ್ಥನೆಯ ಅಗತ್ಯವಿದೆ"

## ಗುರುಗಳ ಉತ್ತರಭಾರತದ ಪ್ರವಾಸ

### 2011ರ ಜನವರಿ 28ರಿಂದ ಫೆಬ್ರವರಿ 13.

ದುಬೈನಲ್ಲಿನ(ಯು.ಎ.ಇ) 10 ದಿನಗಳ ಪ್ರವಾಸದ ನಂತರ ಗುರುಗಳು ಜನವರಿ 28ರಂದು ದೆಹಲಿಗೆ ಆಗಮಿಸಿದರು. 29ರಂದು 2 ಸತ್ಸಂಗಗಳನ್ನು ನಡೆಸಿಕೊಟ್ಟು 30ರಂದು ಗುರ್ಗಾಂವ್‌ನ ಆಶ್ರಮದಲ್ಲಿ ಭಾನುವಾರದ ಸತ್ಸಂಗವನ್ನು ನಡೆಸಿಕೊಟ್ಟರು. ನಂತರ ಹೊಸದಾಗಿ ಸ್ಥಾಪಿಸಲಾದ ದ್ರೋಣಾಚಾರ್ಯರ ವಿಗ್ರಹವನ್ನು ಉದ್ಘಾಟಿಸಿದರು. ಮಧ್ಯಾಹ್ನದ ಭೋಜನದ ನಂತರ ಅವರು



ಸಂಪುಟ 4 ಸಂಚಿಕೆ 2
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ
ಮಾರ್ಚ್ 2011




ತಮ್ಮ ಕಛೇರಿಯಿಂದ ಹೊರಬಂದು ಅಭ್ಯಾಸಿಗಳ ಪ್ರಶ್ನೆಗಳಿಗೆ ಉತ್ತರಿಸಿದರು. ಫೆಬ್ರವರಿ 1ರಂದು ಅವರು 2 ವಿವಾಹಗಳನ್ನು ನೆರವೇರಿಸಿ ರುದ್ರಪುರಕ್ಕೆ ರಸ್ತೆಯ ಮೂಲಕ ಪ್ರಯಾಣಿಸಿದರು.

## ರುದ್ರಪುರ್ ನಲ್ಲಿ ಲಾಲಾಜಿ ಮಹಾರಾಜರ ಜನ್ಮದಿನೋತ್ಸವ.

ಅಂದು ಬೆಳಗಿನ 7:30ರ ಸತ್ಸಂಗವನ್ನು ಗುರುಗಳು ತಮ್ಮ ಕಾಟೇಜಿನಲ್ಲಿಯೇ ನಡೆಸಿಕೊಟ್ಟದ್ದು ರುದ್ರಪುರದಲ್ಲಿ ಒಂದು ವಿಶಿಷ್ಟ ಸಂದರ್ಭವಾಗಿತ್ತು. ಹತ್ತಿರದ ಕೇಂದ್ರಗಳ ಸರಿಸುಮಾರು 200 ಅಭ್ಯಾಸಿಗಳು ನಮ್ಮ ಆದಿ ಗುರುಗಳಾದ ಪೂಜ್ಯ ಲಾಲಾಜಿ ಮಹಾರಾಜರ ಜನ್ಮದಿನಕ್ಕಾಗಿ ನೆರೆದಿದ್ದರು.ಗುರುಗಳು ಅತ್ಯಂತ ಉಲ್ಲಾಸದಿಂದಿದ್ದು ಅವರ ಜೊತೆ0ಯಲ್ಲಿದ್ದ ಅಭ್ಯಾಸಿಗಳೂ ಸಹ ಅವರು ಯಾವುದೇ ಆಯಾಸವಿಲ್ಲದೇ ಇದ್ದುದರಿಂದ ಉಲ್ಲಾಸಿತರಾಗಿದ್ದರು. ಗುರುಗಳು ಸಂಜೆ 5ರ ಸತ್ಸಂಗವನ್ನು ನಡೆಸಿಕೊಟ್ಟರು. ನಂತರ ಸಹೋದರ ಗುರುಪ್ರೀತ್ ಅವರು ಭಜನೆಗಳನ್ನು ಹಾಡಿದರು. ಕಾರ್ಯಕ್ರಮವು "ಅಫ್ತಾಬೇ ಮಘ್ರಾತ್" ನೊಂದಿಗೆ ಕೊನೆಗೊಂಡು ಗುರುಗಳು ಸಂತೋಷಭರಿತರಾದರು. ತಮ್ಮ ಹಿಮಾಲ0ಯದ ಸತ್ಖೋಲ್ ಆಶ್ರಮದ ಪ್ರಯಾಣಕ್ಕೆ ಮೊದಲು ಗುರುಗಳು ರುದ್ರಪುರದಲ್ಲಿ ಆರಾಮದಾಯಕ ವಾಸ್ತವ್ಯ ಹೊಂದಿದರು.

## ನೌಕುಚಿಯಾತಲ್.

ಫೆಬ್ರವರಿ 4ರಂದು ಗುರುಗಳು ನೌಕುಚಿಯಾತಲ್‌ಗೆ ತೆರಳಿದರು. ಗುರುಗಳ ಕಛೇರಿಯ ಕಟ್ಟಡವನ್ನು ನವೀಕರಿಸಲಾಗಿದ್ದು ಅದನ್ನು ಅವರು ಮೆಚ್ಚಿದರು. ಅಲ್ಲಿನ ತಮ್ಮ ವಾಸ್ತವ್ಯವನ್ನು ಮರುದಿನಕ್ಕೂ ವಿಸ್ತರಿಸಿರುವುದಾಗಿ ಹೇಳಿದರು. ಗುರುಗಳು ಪ್ರತಿ ದಿನದ ಬೆಳಗಿನ ಮತ್ತು ಸಂಜೆಯ ಸತ್ಸಂಗವನ್ನು ತಮ್ಮ ಕಛೇರಿ0ಯಲ್ಲಿ ನಡೆಸಿಕೊಟ್ಟರು. ಸುಮಾರು 200 ಅಭ್ಯಾಸಿಗಳು ಬಹಳ ಶಿಸ್ತಿನಿಂದ ಬಾಲ್ಕನಿ ಮತ್ತು ಕೋಣೆಗಳಲ್ಲಿ ಕುಳಿತಿರುತ್ತಿದ್ದರು. ಮರುದಿನ ಅನೌಪಚಾರಿಕವಾಗಿ ನೋವು ನಲಿವಿನ ಬಗ್ಗೆ ಮಾತನಾಡುತ್ತಾ ಹೇಗೆ ನಲಿವು ಒಬ್ಬನನ್ನು ದುರ್ಬಲಗೊಳಿಸುತ್ತದೆ ಮತ್ತು ನೋವು ಹೇಗೆ ಶಕ್ತಗೊಳಿಸುತ್ತದೆ ಎಂಬುದನ್ನು ಹೇಳಿದರು.  ಸಂದರ್ಶಕನೊಬ್ಬನು ನಮ್ಮ ಹೃದಯಗಳು ಈಗಾಗಲೆ ಪರಿಶುದ್ಧವಾಗಿದ್ದರೆ ಆಧ್ಯಾತ್ಮಿಕ ಸಾಧನೆ ಅವಶ್ಯವೇ ಎಂದು ಗುರುಗಳನ್ನು ಕೇಳಿದನು, ಅದಕ್ಕೆ ಗುರುಗಳು ಪರಿಶುದ್ಧವಾಗಿದ್ದರೆ ಸಾಲದು ಎಂದರು. ಅದು ಮೂಲಭೂತವಾದ ಅವಶ್ಯಕತೆ ಆಗಿದೆ. ಒಮ್ಮೆ ನಮ್ಮ ಹೃದ0ಯಗಳು ಪರಿಶುದ್ಧವಾದರೆ ಅದರಲ್ಲಿ ನಾವು ದೈವತ್ವವನ್ನು ತುಂಬುವುದು ಅವಶ್ಯವಾಗಿದೆ. ಗುರುಗಳು ಭಾನುವಾರದ ಬೆಳಗಿನ ಸತ್ಸಂಗವನ್ನು ನಡೆಸಿ ಸತ್ಖೋಲ್ ಗೆ ತೆರಳಿದರು.




## ಸತ್ಖೋಲ್ ನಲ್ಲಿ ಬಸಂತ ಪಂಚಮಿ

ಕೆಟ್ಟದಾದ ರಸ್ತೆಯ ಕಾರಣದಿಂದಾಗಿ ದುರ್ಗಮ ಪ್ರಯಾಣದ ನಂತರ ಗುರುಗಳು ಫೆಬ್ರವರಿ 6ರಂದು ಸತ್ಖೋಲ್‌ನ್ನು ಬೆಳಗಿನ 11ಕ್ಕೆ ತಲುಪಿದರು. ಪೂರ್ವಾನುಮತಿಯಿಲ್ಲದೆ ಅಲ್ಲಿಗೆ ಆಗಮಿಸಿದ್ದ ಅಭ್ಯಾಸಿಗಳನ್ನು ಮಧ್ಯಾಹ್ನದ ಊಟದ ನಂತರ ಅಲ್ಲಿಂದ ತೆರಳುವಂತೆ ತಿಳಿಸಲಾಯಿತು. 7ನೇ ತಾರೀಖಿನಂದು ಗುರುಗಳು 9 ಗಂಟೆಗೆ ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟರು ನಂತರ ಎರಡು ವಿವಾಹಗಳನ್ನು ನೆರವೇರಿಸಿದ ನಂತರ ಗ್ರಂಥಾಲಯ ಮತ್ತು ಸಭಾಂಗಣವನ್ನು ಉದ್ಘಾಟಿಸಿ, ತಮ್ಮ ಈ ಭೇಟಿಯಲ್ಲಿ0ಯೇ ಒಂದು ಸಮ್ಮೇಳನ ನಡೆಯಬೇಕೆಂದು ಸೂಚಿಸಿದರು.

ಗುರುಗಳು ಬಸಂತದ ಸತ್ಸಂಗವನ್ನು ದಿ.8ರಂದು ಬೆಳಗಿನ 9ಕ್ಕೆ ನಡೆಸಿಕೊಟ್ಟರು. ಈಗ್ಗೆ ಕೆಲ ವರ್ಷಗಳಿಂದ ಗುರುಗಳು ಬಸಂತ್ ಅನ್ನು ಸತ್ಖೋಲ್‌ನಲ್ಲಿಯೇ ಆಚರಿಸುತ್ತಿದ್ದಾರೆ. ಸತ್ಸಂಗದ ನಂತರ ಅವರು ಬಹಳ ಆಯಾಸಗೊಂಡಿದ್ದರೂ, ಮಿಷನ್ನಿನ ಪ್ರಕಟನೆಗಳ ಬಿಡುಗಡೆ ಪೂರ್ಣಗೊಳ್ಳುವವರೆಗೂ ಕುಳಿತಿದ್ದರು. ನಂತರ ಗುರುಗಳು ನಿರ್ವಹಣಾ ಕೌಶಲಿಯಾದ ಅಭ್ಯಾಸಿಯೊಬ್ಬರು ನಡೆಸಿಕೊಟ್ಟ ಕಾರ್ಯಾಗಾರದಲ್ಲಿ ಪಾಲ್ಗೊಂಡರು. ಗುರುಗಳು ಒಂದೂವರೆ ತಾಸಿನ ಈ ಭಾಷಣ ಕಾರ್ಯಕ್ರಮವನ್ನು ಆನಂದಿಸಿದರಲ್ಲದೆ, ಅದು ಅವರನ್ನು ಉಲ್ಲಸಿತರನ್ನಾಗಿಯೂ ಮಾಡಿತು. ನಂತರ ಅವರು ಕಛೇರಿಯ ಕಡೆಗೆ ನಡೆಯುತ್ತಾ ದೇವದಾರು ವೃಕ್ಷಗಳ ಬೆಳವಣಿಗೆ0ಯನ್ನು ಪರಿಶೀಲಿಸಿದರು. ಅನಂತರ ಗುರುಗಳು ತಮ್ಮ ಕಛೇರಿ0ಯ ಮುಂದಿನ ಆವರಣದಲ್ಲಿ ಮಧ್ಯಾಹ್ನ ಎಲ್ಲರೊಂದಿಗೆ ವನಭೋಜನದಲ್ಲಿ ಪಾಲ್ಗೊಂಡರು.

## ಹಲ್ದ್ವಾನಿ0ಯಲ್ಲಿ ನೂತನ ಆಶ್ರಮದ ಉದ್ಘಾಟನೆ.

ಫೆಬ್ರವರಿ 9ರಂದು ಗುರುಗಳು ರುದ್ರಪುರಕ್ಕೆ ಬಂದುಸೇರಿದರು. 11ರ ಬೆಳಗ್ಗೆ ಹಲ್ದ್ವಾನಿ ಕೇಂದ್ರಕ್ಕೆ ನೂತನ ಆಶ್ರಮವನ್ನು ಉದ್ಘಾಟಿಸಲು ತೆರಳಿದರು.ಆಶ್ರಮಕ್ಕೆ ಹೋಗುವ ದಾರಿಯಲ್ಲಿ ಪಟಾಕಿಗಳಿಂದ(ಈ ಪ್ರದೇಶಗಳಲ್ಲಿ ಸಾಂಪ್ರದಾ0ಯಕವಾಗಿ ಅಲಂಕರಿಸುವ ಒಂದು ವಿಧಾನ) ಸ್ವಾಗತಿಸಲ್ಪಟ್ಟರು. ಗುರುಗಳು ಆಶ್ರಮದ ಉದ್ಘಾಟನಾ ಶಿಲೆಯನ್ನು ಅನಾವರಣ ಮಾಡಿ ರಿಬ್ಬನ್ ಕತ್ತರಿಸಿದ ನಂತರ ತಮ್ಮ ಕಛೇರಿಗೆ ಹೋದರು.










ಸಂಪುಟ 4 ಸಂಚಿಕೆ 2
ಶ್ರೀ ರಾಮಚಂದ್ರ ಮಿಷನ್®
ಎಕ್ರೋಸ್ ಇಂಡಿಯಾ ವಾರ್ತಾಪತ್ರ
ಮಾರ್ಚ್ 2011




ಸ್ಥಳೀಯ ಸಹೋದರಿಯರು ಸಾಂಪ್ರದಾಯಿಕ ವರ್ಣರಂಜಿತ ಉಡುಗೆಗಳಿಂದ ಅಲಂಕೃತಗೊಂಡು ಹಾಡುಗಳನ್ನಾಡಿದರು. ಪಾಕಶಾಲೆಯಲ್ಲಿ ಅಗ್ನಿಯನ್ನು ಹೊತ್ತಿಸಿದ ನಂತರ ಅವರಿಗಾಗಿ ವೇದಿಕೆಯ ರೀತಿಯಲ್ಲಿ ಸಜ್ಜುಗೊಳಿಸಿದ್ದ ಬಾಲ್ಕನಿ0ಯುಲ್ಲಿ ಕುಳಿತು ಅಲ್ಲಿ ನೆರೆದಿದ್ದ ಸುಮಾರು 1200 ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು.ತ ’ದನಂತರ ನೀಡಿದ ಭಾಷಣದಲ್ಲಿ ಆಶ್ರಮಗಳನ್ನು ಆಧ್ಯಾತ್ಮಿಕ ಏಳಿಗೆಗಾಗಿ ಮಾತ್ರವೇ ಬಳಸಿಕೊಳ್ಳಬೇಕೆಂದು ಹೇಳಿದರು. ಅಭ್ಯಾಸಿಗಳೊಂದಿಗೆ ಬಿಸಿಲಿನಲ್ಲಿ ಕುಳಿತು ಧ್ಯಾನದ ವೇಳೆಯಲ್ಲಿನ ಅವರ ಅನುಭವಗಳನ್ನು ಆಲಿಸಿದರು. ಭೋಜನದ ನಂತರ ಅವರು ರುದ್ರಪುರಕ್ಕೆ ಹಿಂದಿರುಗಿದರು.

## ಪ್ರವಾಸದ ಸಮ0ಯುದಲ್ಲಿ ನಿಡಿದ ಕೆಲವು ಅಣಿಮುತ್ತುಗಳು.

❖ ನೀವು ಬಹಳ ಶ್ರಮವಹಿಸಿ, ಹೃದ0ಯುವನ್ನು ತೊಡಗಿಸಿ ಕೆಲಸಗಳನ್ನು ಮಾಡಿದಾಗ ಯಾರೂ ನಿಮಗೆ ತೊಂದರೆ ಕೊಡುವ ಸಾಹಸ ಮಾಡುವುದಿಲ್ಲ.

❖ ಇಚ್ಛಾ ಶಕ್ತಿಯೆಂಬುದು ಮೆದುಳಿನಲ್ಲಿರುವ ಸಿನಾಪ್ಸ್ (ನರಕೋಶ ಸಂಗಮ)ನಂತೆ ನಿರ್ಣಯ ತೆಗೆದುಕೊಳ್ಳುವುದರ ಹಾಗೂ ಆ ನಿರ್ಣಯವನ್ನು ಕಾರ್ಯಗತಗೊಳಿಸುವುದರ ನಡುವಿನ ಶಕ್ತಿಯಿದ್ದಂತೆ.

❖ ಇಚ್ಛಾ ಶಕ್ತಿಯನ್ನು ಕಾರ್ಯಗತಗೊಳಿಸುವುದೇ ಶಿಸ್ತು.

❖ ಪ್ರೀತಿ ಮಾಡುವ ಅನಾಸಕ್ತಿಗೂ ಹಾಗೆ0ಯೇ ಅಸಾಮರ್ಥ್ಯಕ್ಕೂ ನಡುವೆ ವ್ಯತ್ಯಾಸವಿದೆ.

❖ “ಗುರಿತಪ್ಪಿದ ಚಿಂತನೆಯೇ ಚಿಂತೆ” ಎಂಬ ಬಾಬೂಜಿಯವರ ಮಾತನ್ನು ಉಲ್ಲೇಖಿಸಿದರು.

❖ ಸಂತೋಷವೆಂಬುದು ತಾತ್ಕಾಲಿಕ, ಆದರೆ ಆನಂದವೆಂಬುದು ಒಂದು ಸ್ಥಿತಿ.

12ರ ಸಂಜೆ ತಮ್ಮ ಕಾಟೇಜಿನ ಆವರಣದಲ್ಲಿ ವಿದೇಶದ ಅಭ್ಯಾಸಿಗಳ ಕೊಳಲು ವಾದನವನ್ನು ಹಾಗೂ ಹಾಡುಗಳನ್ನು ಗುರುಗಳು ಬಹಳ ಆನಂದಿಸಿದರು. ಮರುದಿನ ಅವರು ಭಾನುವಾರದ ಸತ್ಸಂಗವನ್ನು ನಡೆಸಿ ದೆಹಲಿಗೆ ಪ್ರಯಾಣ ಬೆಳೆಸಿದರು. ಮಾರ್ಗದಲ್ಲಿ ಅವರು ಮೊರದಾಬಾದಿನಲ್ಲಿ ಮಧ್ಯಾಹ್ನದ ಭೋಜನಕ್ಕಾಗಿ ನಿಲ್ಲಿಸಿದ್ದರು.



## ಜೋಧ್ಪುರ್: ನೆನಪಿನಲ್ಲಿಡಬೇಕಾಗಿರುವ ಭೇಟಿ

ಗುರುಗಳ ಈಗಿನ ಆಧ್ಯಾತ್ಮಿಕ ಮಹಾಯಾತ್ರೆ0ಯುಲ್ಲಿ 10 ವರ್ಷಗಳ ಸುದೀರ್ಘ ಅವಧಿ0ಯು ನಂತರ ಜೋಧ್ಪುರಕ್ಕೆ ನೀಡಿದ ಅಲ್ಪಾವಧಿಯ ಭೇಟಿ0ಯುೂ ಸೇರಿತ್ತು. ರಾಜಸ್ಥಾನದಿಂದ ನೆರೆದಿದ್ದ 3000 ಅಭ್ಯಾಸಿಗಳು ನೂತನ ಧ್ಯಾನ ಮಂದಿರವನ್ನು ಈ ಮರುಭೂಮಿಗೆ ನೀಡಿದ ಆಧ್ಯಾತ್ಮಿಕ ಓಯಸಿಸ್ ಉಡುಗೊರೆಯೆಂದೇ ಭಾವಿಸಿದರು.

ಫೆಬ್ರವರಿ 15ರಂದು ಎರಡು ದಿನಗಳಿಂದ ಸುರಿಯುತ್ತಿದ್ದ ಮಳೆಯಿಂದ ಮುಕ್ತಗೊಳಿಸಿ ತವೊ್ಮಡನೆ ಅತ್ಯವಶ್ಯವಾಗಿದ್ದ ಸೂರ್ಯನ ಪ್ರಕಾಶದೊಂದಿಗೆ ದೆಹಲಿಯಿಂದ ವಾಯುಮಾರ್ಗದಲ್ಲಿ ಬಂದುಸೇರಿದರು. ರುದ್ರಪುರ್ ಹಾಗೂ ದೆಹಲಿಯ ದೀರ್ಘ ಪ್ರಯಾಣದ ಹೊರತಾಗಿಯೂ ಗುರುಗಳು ಬಹಳ ಲವಲವಿಕೆಯಿಂದಿದ್ದರು.

ಗುರುಗಳು ಎರಡು ಬಾರಿ ಹೊರಬಂದು ಅಭ್ಯಾಸಿಗಳೊಂದಿಗೆ ಮಾತನಾಡಿದಾಗ ಅವರೆಲ್ಲರೂ ಬಹಳ ಸಂತಸಗೊಂಡರು. ಗುರುಗಳು ಹುಲ್ಲುಗಾವಲಿನಲ್ಲಿ ಅಭ್ಯಾಸಿಗಳೊಂದಿಗೆ ದೀರ್ಘಕಾಲ ಅಭ್ಯಾಸಿಗಳೊಂದಿಗೆ ಮಾತನಾಡುತ್ತಿರುವಾಗ ಕಾಟೇಜಿನ ಮಹಾದ್ವಾರಗಳು ತೆರೆದೇ ಇದ್ದವು. ಅವರ ಪಾದಸ್ಪರ್ಶ ಮಾಡಿದ ಸಹೋದರಿಯೊಬ್ಬರಿಗೆ ನಮ್ಮ ಪದ್ಧತಿಯಲ್ಲಿ ಇದಕ್ಕೆ ಅನುಮತಿಯಿಲ್ಲವೆಂದೂ, ನಾವು ಮಾಡಿದುದರ ಪರಿಣಾಮಗಳ ಬಗ್ಗೆ ಯೋಚಿಸದೆ ಏನನ್ನೂ ಮಾಡಬಾರದೆಂದು ಹೇಳಿದರು. ಪದ್ಧತಿಗೆ ಯಾರು ವಿರುದ್ಧವಾಗಿದ್ದಾರೋ ಹಾಗೂ ಅಭ್ಯಾಸಿಗಳೊಂದಿಗೆ ಯಾರು ಪ್ರತಿರೋಧ ಹೊಂದಿರುವರೋ ಅಂಥವರಿಗಾಗಿ ಪ್ರಾರ್ಥಿಸುವಂತೆ ಸಲಹೆನೀಡಿದರು.

ಫೆಬ್ರವರಿ 16ರ ಬೆಳಗ್ಗೆ 9:15ಕ್ಕೆ ಜೋಧ್ಪುರ್ ಆಶ್ರಮವನ್ನು ಉದ್ಘಾಟಿಸಿದ ನಂತರ ನೂತನವಾಗಿ ನಿರ್ಮಿಸಿದ ಧ್ಯಾನ ಮಂದಿರದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು. ಸಹೋದರಿ ರಂಜನಾ ಮೆಹ್ತಾರವರು ಕೆಲವು ಭಜನೆಗಳನ್ನು ಹಾಡಿದ ನಂತರ ಗುರುಗಳು ತಮ್ಮ ಕಛೇರಿಯೆಡೆಗೆ ನಡೆದು ಅಭ್ಯಾಸಿಗಳೊಂದಿಗೆ ಮಾತನಾಡುತ್ತಾ ಸೂರ್ಯನ ಬಿಸಿಲಿನಲ್ಲಿ ಆನಂದಿಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಮಕ್ಕಳನ್ನು ಭೇಟಿಮಾಡಲು ಗುರುಗಳು ಸಂಜೆ ಕಾಟೇಜಿನಿಂದ ಹೊರಗೆ ಬಂದಿದ್ದರು.

17ರಂದು ಗುರುಗಳು ಸತ್ಸಂಗದಲ್ಲಿ ಭಾಗವಹಿಸದೆ ಅವರಿಗಾಗಿ ಕಾಟೇಜಿನ ಬಳಿ ಕಾಯುತ್ತಿದ್ದ ಅಭ್ಯಾಸಿಗಳ ಬಗೆಗೆ ಬೇಸರ ವ್ಯಕ್ತಪಡಿಸಿದರು. ಅವರು ಎಲ್ಲಾ ಸ್ವಯಂಸೇವಕರಿಗೆ ಬೆಳಗ್ಗೆ 11:30ಕ್ಕೆ ಬೈಠಕವನ್ನು ನೀಡಿದರು. ಹೀಗೇ ಚರ್ಚೆ ಮಾಡುವಾಗ ಆಕರ್ಷಕವಾದ ಹೊಸ ಸ್ಥಳಗಳಿಗೆ ಭೇಟಿ ನೀಡುವುದು ಉಪಯೋಗಕ್ಕಿಂತ ನಮ್ಮ ಅಹಂಕಾರವನ್ನು ವರ್ಧಿಸುತ್ತವೆ ಎಂದರು. ಮಧ್ಯಾಹ್ನದ ನಂತರ ಗುರುಗಳು ದೆಹಲಿಗೆ ಹೊರಟರು.










ಸಂಪುಟ 4 ಸಂಚಿಕೆ 2 ಮಾರ್ಚ್ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ


## ಹೊಸ ಪ್ರಕಟಣೆಗಳು




ಅವರ್ ಸೊಲ್ವದು ಯಾದೇನಿಲ್–3
ತಮಿಳು





ಹೃದಯವಾಣಿ 2006
ಕನ್ನಡ



ಟ್ರುಥ್ ಎಟರ್ನಲ್
ಮಲಯಾಳಮ್




ಶ್ರೀ ರಾಮಚಂದ್ರ ಕಿ ಸಮಗ್ರ ಕೃತಿಯಾ
(ಲಾಲಾಜಿ) ಭಾಗ 2
ಹಿಂದಿ




ದಿ ವಂಡರ್‌ಫುಲ್ 10 ಆಂಡ್ ವೈ
ಸ್ಪ್ಯಾನಿಶ್, ಡ್ಯಾನಿಶ್, ಇಟಾಲಿಯನ್,
ಜರ್ಮನ್, ಇಂಗ್ಲಿಶ್, ಹಿಂದಿ, ಫ್ರೆಂಚ್
ಮತ್ತು ಪೋರ್ಚುಗೀಸ್

ವಸಂತ ಪಂಚಮಿಯಂದು ಬಿಡುಗಡೆಯಾದ





ಹೃದಯೀಚೆ ಬೋಲ್ 2008
ಮರಾಠಿ




ಹೃದಯವಾಣಿ 2008
ಗುಜರಾತಿ




ದಿಲ್ ಕೀ ಆವಾಜ್ 2008
ಹಿಂದಿ




ಪ್ರೇ ಫಾರ್ ಚೇಂಜ್
ಡಿವಿಡಿಗಳು

## ಪ್ರಕಟಣೆಗಳು

### ಹೊಸ ನೇಮಕಾತಿಗಳು

ಅಜಯ್ ಕುಮಾರ್ ಭಟ್ಟರ್
ವಲಯ ಪ್ರಮುಖರು, ಪಶ್ಚಿಮ ಬಂಗಾಳ (ವಲಯು–13)

ಮಿಸಾಲ್ ಮೆಹ್ತಾ
ಕೇಂದ್ರ ವ್ಯವಸ್ಥಾಪಕರು, ಕೋಲ್ಕತ್ತಾ.

ದೀಪಕ್ ಸಾಹ್
ಕೇಂದ್ರಾಧಿಕಾರಿಗಳು, ಹಲ್ದ್ವಾನಿ.

ಅನಿಲ್ ಸಿಂಗ್ ಬಿಷ್ಟ್
ಹಲ್ದ್‌ವಾನಿಯ ಆಶ್ರಮ ಮೇಲ್ವಿಚಾರಕರು

### ಗುರುಗಳ ಜನ್ಮದಿನಾಚರಣೆ

ಗುರುಗಳ ತಮ್ಮ 85ನೆಯ ಹುಟ್ಟುಹಬ್ಬವನ್ನು ಜುಲೈ 23ರಿಂದ 25ರವರೆಗೆ ತಿರುಪ್ಪೂರಿನಲ್ಲಿ ಆಚರಿಸಲು ಅವಕಾಶವನ್ನು ಕರುಣಿಸಿದ್ದಾರೆ. ಇದು ಭಾರತಕ್ಕೆ ರಾಷ್ಟ್ರೀಯ ಮಟ್ಟದ ಆಚರಣೆಯಾಗಿರುತ್ತದೆ. ಉತ್ಸವದಲ್ಲಿ ಭಾಗವಹಿಸಲು ಹಾಗೂ ಗುರುಗಳ ಉಪಸ್ಥಿತಿಯಲ್ಲಿರಲು ಎಲ್ಲಾ ಅಭ್ಯಾಸಿಗಳಿಗೆ ಆಹ್ವಾನವಿದೆ.

## ಗತಃಕಾಲಕ್ಕೊಂದು ಇಣುಕುನೋಟ



ಬಾಬೂಜಿಯವರು ತಮ್ಮ ಮಲೇಶಿಯಾ ಪ್ರವಾಸದ ಮುನ್ನ ಕೆಲವು ದಿನಗಳ ಕಾಲ ಚೆನ್ನೈನಲ್ಲಿದ್ದರು. ಈ ಮುಂದಿನದನ್ನು ಗುರುಗಳ ದಿನಚರಿಯಿಂದ ಆಯ್ದುಕೊಳ್ಳಲಾಗಿದೆ.

3ನೇ ಏಪ್ರಿಲ್ 1977, ಭಾನುವಾರ.

ಗುರುಗಳು ಗಾಯತ್ರಿಗೆ ಬೆಳಗ್ಗೆ 8 ಗಂಟೆಗೆ ಬಂದರು. ಇತರ ಕೇಂದ್ರಗಳ ಅಭ್ಯಾಸಿಗಳಿಗೂ ಸತ್ಸಂಗದಲ್ಲಿ ಭಾಗವಹಿಸಲು ಅನುಕೂಲವಾಗಲೆಂದು ಸತ್ಸಂಗದ ವೇಳೆಯನ್ನು 9ಕ್ಕೆ ಬದಲಾಯಿಸಲಾಗಿತ್ತು. ನೆಲ್ಲೂರು ಕೇಂದ್ರದ ಇನ್ನೊಂದು ಬಸ್ಸಿನ ಅಭ್ಯಾಸಿಗಳು ಸೇರಿದಾಗ ಸಂಖ್ಯೆಯು ವರ್ಧಿಸಿ ಮನೆಯು ಅಭ್ಯಾಸಿಗಳಿಂದ ತುಂಬಿಹೋಗಿತ್ತು. ಅಂದು ಬೆಳಗ್ಗೆ ಗಾಯತ್ರಿಯಲ್ಲಿ ಸುಮಾರು 500 ಅಭ್ಯಾಸಿಗಳು ಉಪಸ್ಥಿತರಿದ್ದರೆಂದು ಅಂದಾಜುಮಾಡಲಾಗಿತ್ತು. ಮೇಲಿನ ಮಹಡಿ, ಕೆಳಗಿನ ಹಾಲ್, ನಡೆದಾಡುವ ಜಾಗ ಎಲ್ಲವೂ ಪೂರ್ತಿಯಾಗಿ ತುಂಬಿಹೋಗಿದ್ದವು. ಅಲ್ಲಿ ಬಸಂತ ಪಂಚಮಿಯ ವಾತಾವರಣವಿತ್ತು. ಗುರುಗಳು ತಮ್ಮ ಕೋಣೆಯಿಂದಲೇ ಅಭ್ಯಾಸಿಗಳಿಗೆ ಸುಮಾರು 40 ನಿಮಿಷಗಳ ಕಾಲ ಪ್ರಾಣಾಹುತಿಯನ್ನು ನೀಡಿದರು.ಅದು ಅತ್ಯುತ್ತಮವಾದ ಬೈಠಕವಾಗಿತ್ತು.

ಸತ್ಸಂಗದ ನಂತರ ಇಡ್ಲಿ,ವಡೆ,ಚಹಾ ಮತ್ತು ಬಾಳೆಯ ಹಣ್ಣನ್ನು ಒಳಗೊಂಡ ಬೆಳಗಿನ ಉಪಾಹಾರವನ್ನು ಸುಮಾರು ಒಂದೂವರೆ ಗಂಟೆಗಳ ಕಾಲ ಅಭ್ಯಾಸಿಗಳಿಗೆ ಉಣಬಡಿಸಲಾಯಿತು. ಗುರುಗಳಿಗೆ ವಿಶ್ರಾಂತಿಯನ್ನೀಯಲೆಂದು 11:30ಕ್ಕೆ ಎಲ್ಲರೂ ಹಿಂದಿರುಗಿದರು. ಗುರುಗಳು ಇಡ್ಲಿ ಮತ್ತು ಸಾಂಬಾರನ್ನು ಒಳಗೊಂಡ ಮಧ್ಯಾಹ್ನದ ಲಘು ಭೋಜನದ ನಂತರ ಚೆನ್ನಾಗಿ ವಿಶ್ರಾಂತಿಯನ್ನು ತೆಗೆದುಕೊಂಡರು. ಅಭ್ಯಾಸಿಗಳು ಪುನಃ ಸಂಜೆ 4 ಗಂಟೆಗೆ ಮೇಳೈಸಿದರು. ಮೇಲ್ಮಹಡಿಯಲ್ಲಿ ಮತ್ತು ಕೆಳಮಹಡಿಯಲ್ಲಿ ಪ್ರತ್ಯೇಕವಾಗಿ ಒಂದೇ ಸಮಯದಲ್ಲಿ ಪ್ರಶಿಕ್ಷಕರಾದ ಶ್ರೀ ಎಸ್ ಕೆ ರಾಜಗೋಪಾಲನ್, ಶ್ರೀ. ಸಿ.ಎ. ರಾಜಗೋಪಾಲನ್ ಹಾಗೂ ಶ್ರೀ.ವಿ. ವೆಂಕಟಪತಿಯವರು ಸಹಜ ಮಾರ್ಗದ ಬಗ್ಗೆ ಭಾಷಣಗಳನ್ನು ನೀಡಿದರು. ಪ್ರಶ್ನೋತ್ತರ ಕಾರ್ಯಕ್ರಮಗಳೂ ಸಹ ನಡೆದವು. ಪುನಃ ಸಂಜೆ 6:30ಕ್ಕೆ ಗುರುಗಳು ಸುಮಾರು 20 ನಿಮಿಷಗಳ ಕಾಲ ಸತ್ಸಂಗವನ್ನು ನಡೆಸಿಕೊಟ್ಟರು. ರಾತ್ರಿಯ ಭೋಜನಕ್ಕೆ ಗುರುಗಳು ಬೆಸಂಟ್ ನಗರಕ್ಕೆ ತೆರಳಿದರು. ಅದು ಎಲ್ಲರಿಗೂ ಬಹಳ ಸಂತೋಷದ ಹಾಗೂ ಆಧ್ಯಾತ್ಮಿಕ ಲಾಭದಾಯಕ ದಿನವಾಗಿತ್ತು. ಇಷ್ಟೊಂದು ಜನರ ಬಹಳ ದೂರದ ಸ್ಥಳಗಳಿಂದ ಗುರುಗಳನ್ನು ನೋಡಲು ಬಂದದ್ದು ಗುರುಗಳಿಗೂ ಬಹಳ ಸಂತೋಷವನ್ನುಂಟುಮಾಡಿತ್ತು. ಆಂಧ್ರದಿಂದ ಬಂದಿದ್ದ 3 ಬಸ್ಸಿನ ಅಭ್ಯಾಸಿಗಳು ಸಂಜೆ ಹಿಂದಿರುಗಿದರು. ವಾಸ್ತವವಾಗಿ ಹೊರಕೇಂದ್ರಗಳಿಂದ ಬಂದಿದ್ದ ಅಭ್ಯಾಸಿಗಳೆಲ್ಲರೂ ಸಂಜೆ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿದರು.

ಆಂತರಿಕ ಪ್ರಸಾರಕ್ಕಾಗಿ ಮಾತ್ರ
ಸಂಪುಟ 4 ಸಂಚಿಕೆ 2
ಮಾರ್ಚ್ 2011
ಶ್ರೀ ರಾಮಚಂದ್ರ ಮಿಷನ್®
ಎಕ್ರೋಸ್ ಇಂಡಿಯಾ ವಾರ್ತಾಪತ್ರ

# ಪೂಜ್ಯ ಲಾಲಾಜೀ ಮಹಾರಾಜರ 139ನೇ ಜನ್ಮದಿನಾಚರಣೆಗಳು.

"ಸಂತೋಷವೆಂಬುದು ಹೊರಗೆಲ್ಲೂ ಇಲ್ಲ,ಅದು ನಮ್ಮ ಲಕ್ಷ್ಯವನ್ನು ಧೃಢವಾಗಿ ವ್ಯವಸ್ಥಿತವಾಗಿಡುವುದರಲ್ಲಿ ಹಾಗೂ ನಮ್ಮ ಮನಸ್ಸನ್ನು ಪಕ್ಕಕ್ಕೆ ಸರಿಸುವುದರಲ್ಲೇ ಇದೆ. ಈ ರಹಸ್ಯವನ್ನು ತಿಳಿದವರು ಸಂತೋಷಕ್ಕಾಗಿ ಬಾಹ್ಯ ಶೋಧನೆ ಮಾಡಬೇಕಾದ ಅವಶ್ಯಕತೆಯಿಲ್ಲ"

–ಲಾಲಾಜೀ ಮಹಾರಾಜರು.



ಜೋಧಪುರ



ಬೆಂಗಳೂರು

ನಮ್ಮ ಸಂಸ್ಥೆಯ ಅದಿ–ಗುರುಗಳಾದ ಸಮರ್ಥ ಗುರು ಪೂಜ್ಯ ಲಾಲಾಜೀ ಮಹಾರಾಜರ 139ನೇ ಜನ್ಮದಿನೋತ್ಸವವನ್ನು ದೇಶದ ವಿವಿಧೆಲ್ಲೆಡೆ ಬಹಳ ಉತ್ಸಾಹದಿಂದ ಹಾಗೂ ಭಕ್ತಿಯಿಂದ ಆಚರಿಸಲಾಯಿತು. ಬಹುತೇಕ ಎಲ್ಲ ಕೇಂದ್ರಗಳಲ್ಲಿ ಕಾರ್ಯಕ್ರಮವನ್ನು ಬೆಳಗಿನ 7:30ರ ಸತ್ಸಂಗದೊಂದಿಗೆ ಪ್ರಾರಂಭಿಸಲಾಯಿತು. ಅನೇಕ ಕೇಂದ್ರಗಳಲ್ಲಿ ಲಾಲಾಜೀ ಮಹಾರಾಜರ ಜೀವನ ಕುರಿತ ಡಿವಿಡಿ ದೃಶ್ಯಾವಳಿ, ಲಾಲಾಜೀ ಮಹಾರಾಜರ ಕುರಿತ ಭಾಷಣಗಳು, 'ಚಿರಂತನ ಸತ್ಯ'ದ ಬಗೆಗೆ ಚರ್ಚೆಗಳು, ಕೆಲವು ಭಜನೆಗಳು, ಅಭ್ಯಾಸಿಗಳಿಂದ ಹಾಗೂ ಮಕ್ಕಳಿಂದ ನಾಟಕಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು, ಮುಕ್ತಸಭೆಗಳು ಅಥವಾ 2010ರ ಪ್ರಬಂಧ ಕಾರ್ಯಕ್ರಮದ ಬಹುಮಾನ ವಿತರಣಾ ಸಮಾರಂಭಗಳು ಹೀಗೆ ಅನೇಕ ಕಾರ್ಯಕ್ರಮಗಳನ್ನು ನಡೆಸಲಾಯಿತು. ದಿನದ ಕಾರ್ಯಕ್ರಮಗಳು ಸಂಜೆಯ ಸತ್ಸಂಗದೊಂದಿಗೆ ಮುಕ್ತಾಯವಾದವು.


ಹುಬ್ಬಳ್ಳಿ

ಈ ಕಾರ್ಯಕ್ರಮಗಳನ್ನು ಹೊರತುಪಡಿಸಿ ಉ.ಪ್ರದೇಶದ ಅಲಹಾಬಾದಿನಲ್ಲಿ ಡಾ. ವಿ ಕೆ ಅಗರ್ವಾಲ್ ಅವರು ದಂತ ಚಿಕಿತ್ಸಾಲಯದ ಉದ್ಘಾಟನೆಯನ್ನು ಮಾಡಿದರು. ಪ್ರಬಂಧ ಕಾರ್ಯಕ್ರಮದ ಮಾನ್ಯತಾ ಪತ್ರಗಳನ್ನು ವಿತರಿಸಲಾಯಿತು. ಇಂದೋರ್(ಮ.ಪ್ರ)ನಲ್ಲಿ ಆಶ್ರಮದ ಹೊಸ ಭೂಮಿಯಲ್ಲಿ ಸುಮಾರು 800 ಅಭ್ಯಾಸಿಗಳು ಸೇರಿದ್ದರು ಹಾಗೂ "ನನ್ನಲ್ಲಿ ನಾನು ಗಮನಿಸಿರುವ ಬದಲಾವಣೆಗಳು" ಎಂಬ ಬಗ್ಗೆ ಆತ್ಮಾವಲೋಕನ ಕಾರ್ಯಕ್ರಮದಲ್ಲಿ ಎಲ್ಲರೂ ತಮ್ಮ ಅನುಭವಗಳನ್ನು ಹಂಚಿಕೊಂಡರು. ವಿಜಯವಾಡ(ಆ.ಪ್ರ)ದಲ್ಲಿ ಭಾಷಣಗಳ ಜೊತೆಗೆ ಗುರುಗಳ ಬೋಧನೆಗಳ ಬಗ್ಗೆ 400 ಅಭ್ಯಾಸಿಗಳಿಗೆ ಪ್ರಶ್ನಾವಳಿ ಕಾರ್ಯಕ್ರಮವನ್ನು ನಡೆಸಲಾಯಿತು. ಹೈದರಾಬಾದ್‌ನ ತುಮಕುಂಟ ಆಶ್ರಮದಲ್ಲಿ "ಆತ್ಮದ ಪ್ರತಿಫಲನದ ಸಾಮರ್ಥ್ಯ" ಎಂಬ ವಿಷಯವನ್ನು ಕುರಿತ ನಾಟಕ ಹಾಗೂ "ಗುರು ಪಡುಕಭಯಂ" ಕುರಿತ ಮನಮುಟ್ಟಿದ ನೃತ್ಯ ಕಾರ್ಯಕ್ರಮಗಳನ್ನು ಅಭ್ಯಾಸಿಗಳು ಆನಂದಿಸಿದರು.


ಇಂದೋರ್

ಅಂಗುಲ್(ಒರಿಸ್ಸಾ)ನಲ್ಲಿ ಸುಮಾರು 120 ಅಭ್ಯಾಸಿಗಳು ಭಾಷಣಗಳನ್ನು,ಲಾಲಾಜೀ ಮಹಾರಾಜರ ಜೀವನದ ಡಿವಿಡಿಯ ದೃಶ್ಯಾವಳಿ,ಮುಕ್ತಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ದೇಶದ ರಾಜಧಾನಿ ದೆಹಲಿಯಲ್ಲಿ ಆಸೆಗಳಿಂದ ಆಸೆಗಳಿಲ್ಲದರೆಡೆಗೆ, ಶರಣಾಗತಿಯ ಸಹಾಯದಿಂದ ಸಂಸ್ಕಾರಗಳಿಂದ ಸ್ವತಂತ್ರ್ಯದೆಡೆಗಿನ ಪರಿವರ್ತನೆಯನ್ನು ವರ್ಣಿಸುವ "ಲಕ್ಷ್ಯ" ಹಾಗೂ "ಕಟ್ಪುತ್ಲಿ" ಎಂಬ ನಾಟಕಗಳನ್ನು ಪ್ರಸ್ತುತಪಡಿಸಲಾಯಿತು.


ಲಾಲ್ಪಾನಿಯ

ಕರ್ನಾಟಕದಲ್ಲಿ , ಸುಮಾರು 350 ಅಭ್ಯಾಸಿಗಳು ಪುಟ್ಟ ಕೇಂದ್ರಗಳಾದ ಚಿಂಚೋಳಿ, ಚಿತ್ತಾಪುರ್, ವಾಡಿ, ಶಹಾಪುರ್ ಮತ್ತು ಸೇಡಮ್‌ಗಳಿಂದ ಬಂದು ಗುಲ್ಬರ್ಗ ಕೇಂದ್ರದಲ್ಲಿ ಉತ್ಸವದಲ್ಲಿ ಪಾಲ್ಗೊಂಡರು. ಸುಮಾರು 240 ಅಭ್ಯಾಸಿಗಳು ಸಿರಸಿ, ಬೇಲೂರು, ಧಾರವಾಡ, ಕಲ್ಲೂರ್, ಗದಗ, ನವನಗರ, ನವಲಗುಂದ ಮತ್ತು ಹಾವೇರಿಗಳಿಂದ ಹುಬ್ಬಳ್ಳಿ ಕೇಂದ್ರದಲ್ಲಿ ಉತ್ಸವವನ್ನು ಆಚರಿಸಿದರು. ಯುವ ಅಭ್ಯಾಸಿಗಳಿಂದ ಗರುಡನ ದ್ವಂದ್ವ ಎಂಬ ಕಿರುನಾಟಕವು ಅದ್ಭುತವಾಗಿ ಮೂಡಿಬಂತು. ಬೆಂಗಳೂರಿನಲ್ಲಿ 1500 ಅಭ್ಯಾಸಿಗಳು ಪರಂಧಾಮದಲ್ಲಿ ಈ ದಿನವನ್ನು ಗುರುವರ್ಯರುಗಳು ಮತ್ತವರ ಉಪದೇಶಗಳ ಕುರಿತು ಭಾಷಣಗಳು ಮತ್ತು ಭಂಡಾರಗಳ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದರೊಂದಿಗೆ ಆಚರಿಸಿದರು. ಮಂಗಳೂರು ಮತ್ತು ಕೊಳ್ಳೇಗಾಲಗಳಲ್ಲಿ ಲಾಲಾಜೀ ಮಹಾರಾಜರ ಜೀವನ ಮತ್ತು ಬೋಧನೆಗಳ ಕುರಿತು ಕಾರ್ಯಕ್ರಮಗಳು ನಡೆದವು.


ಹೈದರಾಬಾದ್

ಜೋಧಪುರದಲ್ಲಿ(ರಾಜಸ್ತಾನ್) ಜೈಸಲ್ಮೇರ್ ರಸ್ತೆಯ ಕೆರು ಎಂಬ ಹಳ್ಳಿಯ ಬಳಿಯ ಆಶ್ರಮದ ಹೊಸ ಸ್ಥಳದಲ್ಲಿ ಉತ್ಸವವು ನಡೆಯಿತು. ಗುರು ಶಿಷ್ಯರ ಪ್ರೇಮವನ್ನು ಬಿಂಬಿಸುವ ಮನೋಹರವಾದ ಕಿರು ನಾಟಕವು ಪ್ರದರ್ಶಿಸಲ್ಪಟ್ಟಿತು. ಗುವಾಹಾಟಿ ಮತ್ತು ತೀನ್‌ಸುಖಿಯಾ(ಅಸ್ಸಾಮ್) ಗಳಲ್ಲಿ "ಅವರನ್ನು ಗಮನಿಸು, ಪಾಲಿಸು,ಅನುಸರಿಸು" ಎಂಬ ವಿಷಯದ ಬಗ್ಗೆ ಭಾಷಣಗಳಿದ್ದವು.

ತಿರುನೆಲ್ವೇಲಿಯಲ್ಲಿ(ತಮಿಳುನಾಡು) ಸಹೋದರ ಎ.ಪಿ.ದುರೈ(ಜಂಟಿ ಕಾರ್ಯದರ್ಶಿ)ಯವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಕನ್ಯಾಕುಮಾರಿ, ಪಾನಗುಡಿ, ಕೊಲಿಯಂಕುಳಮ್, ವದಕಾಂಗುಳಮ್, ಟುಟಿಕಾರನ್, ತೆಂಕಾಸಿ, ನಾಗರಕೊಯಿಲ್, ರಾಜಪಾಳ್ಯಮ್, ಕೋವಿಲಪಟ್ಟಿ ಮತ್ತು ತೋವಳ್ಳೈ ಕೇಂದ್ರಗಳ ಸುಮರ್‍ರು 250 ಅಭ್ಯಾಸಿಗಳು ಪಾಲ್ಗೊಂಡಿದ್ದರು. ಮೂವರು ಸಹೋದರಿಯರು ಲಾಲಾಜಿ ಮಹಾರಾಜರ ಬರಹ, ಜೀವನ ಮತ್ತು ಬೋಧನೆಗಳ ಬಗ್ಗೆ ಚುಟುಕಾದ ಮತ್ತು ಪರಿಣಾಮಕಾರಿಯಾದ ಭಾಷಣಗಳನ್ನು ಮಾಡಿದರು. ಗುರುವರ್ಯರುಗಳ ಉಪದೇಶಗಳ ಬಗೆಗೆ ಗುಂಪು ಚರ್ಚೆ ನಡೆದು ನಂತರ ಅದನ್ನು ಪ್ರಸ್ತುತ ಪಡಿಸಲಾಯಿತು. ಮಧ್ಯಾಹ್ನದ ಭೋಜನಾ ನಂತರ ಅಭ್ಯಾಸಿಗಳು ವಿಷಯಗಳನ್ನು ಸ್ಥಳದಲ್ಲಿಯೇ ಆಯ್ದುಕೊಂಡು ಅದರ ಮೇಲೆ ತಕ್ಷಣವೇ ಮಾತನಾಡುವ ಕಾರ್ಯಕ್ರಮವಿತ್ತು.


ಮಂಗಳೂರು

ಸಂಪುಟ 4 ಸಂಚಿಕೆ 2
ಶ್ರೀ ರಾಮಚಂದ್ರ ಮಿಷನ್®
ಎಕ್ರೋಸ್ ಇಂಡಿಯಾ ವಾರ್ತಾಪತ್ರ
ಮಾರ್ಚ್ 2011

## ನವೀನ ಪ್ರಭಾಕೇಂದ್ರ, ತಂಜಾವೂರು

ತಮಿಳುನಾಡಿನ ತಂಜಾವೂರು ಜಿಲ್ಲೆ ನಮ್ಮ ಗುರುಗಳ ಮೂಲಸ್ಥಳವಾಗಿದೆ. ಇಲ್ಲಿ ಮಿಷನ್ನಿನ ಒಂದು ಆಶ್ರಮವಿರಬೇಕೆಂದು ಬಹುದಿನಗಳ ಸ್ವಪ್ನವಾಗಿದ್ದಿತು. ಅನೇಕ ವರ್ಷಗಳ ಹುಡುಕಾಟದ ನಂತರ ಅಭ್ಯಾಸಿಗಳು ತಿರುವರೂರಿನ ರಸ್ತೆಯಿಂದ 14 ಕಿ.ಮೀ. ದೂರದಲ್ಲಿ ಆಶ್ರಮಕ್ಕೆ ಸೂಕ್ತ ಸ್ಥಳವನ್ನು ಗುರುತಿಸುವಲ್ಲಿ ಸಫಲರಾದರು. ಗುರುಗಳ ಇಚ್ಛೆಯಂತೆ, ತೆಂಗಿನ ತೋಟ, ಕ್ಯಾಸೊರೀನಾ( ಪೈನ್ ಜಾತಿಯ ಮರ), ಮತ್ತು ಮಾವಿನ ಮರಗಳಿಂದ ಕೂ ಡಿದ ಹತ್ತು ಎಕರೆ ಜಾಗವನ್ನು ಆಶ್ರಮಕ್ಕಾಗಿ ತೆಗೆದುಕೊಳ್ಳಲಾಗಿದೆ.

ಇದರೊಂದಿಗೆ ಗುರುಗಳ ಅನುಸಾರ ಕೈತೋಟದ ಅವಕಾಶವಿರುವ, ವಿಶಾಲವಾದ, ತಲಾ 4000 ಚ.ಅ ವಿಸ್ತೀರ್ಣದ ನಿವೇಶನಗಳನ್ನೊಳಗೊಂಡ ಅಭ್ಯಾಸಿ ಕಾಲೊನಿಯನ್ನು ಇಪ್ಪತ್ತು ಎಕರೆ ಜಾಗದಲ್ಲಿ ಯೋಜಿಸಲಾಗಿದೆ. ಸ್ಥಳದಲ್ಲಿ ಅಪಾರ ನೀರಿನ ಲಭ್ಯತೆಯಿದೆ.

ನಿವೇಶನಗಳ ಬೆಲೆಯು ರಸ್ತೆಯ ಅಭಿವೃದ್ಧಿ, ನೀರಿನ ಸೌಕರ್ಯ ಮತ್ತು ಒಳಚರಂಡಿ ವ್ಯವಸ್ಥೆಗಳನ್ನು ಒಳಗೊಂಡಿರುವುದರಿಂದ ಅಭ್ಯಾಸಿಗಳು ಬೇಗನೇ ಮನೆಗಳನ್ನು ನಿರ್ಮಿಸಿ ಆಶ್ರಮದ ಯೋಜನೆಯನ್ನು ಬೆಂಬಲಿಸಿ ಸದುಪಯೋಗ ಮಾಡಿಕೊಳ್ಳಬಹುದು.





## ಒತ್ತಡ ನಿರ್ವಹಣೆಯ ಕಾರ್ಯಾಗಾರ, ವಿಶಾಖಪಟ್ನಂ

ಫೆಬ್ರವರಿ 9ರಂದು ಭಾರತೀಯ ನೌಕಾಪಡೆಯ ಅಧಿಕಾರಿಗಳು ಮತ್ತು ನಾವಿಕರಿಗಾಗಿ ಐಎನ್ಎಸ್ ಶತವಾಹನದಲ್ಲಿಒತ್ತಡ ನಿರ್ವಹಣೆಯ ಕಾರ್ಯಾಗಾರವನ್ನು ನಡೆಸಿಕೊಡಲಾಯಿತು. ಸಬ್‌ಮರೀನ್ ಶಾಲೆಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕಮಾಂಡರ್ ಸೋ. ಶ್ರೀರಾಮ್ ಅಮೂರ್‌ರವರು ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಸೋ. ವಿ.ಆರ್.ಎಸ್. ನಾಗಶರ್ಮಾರವರು 'ಧ್ಯಾನದ ಮೂಲಕ ಒತ್ತಡ ಮತ್ತು ಸಮಯ ನಿರ್ವಹಣೆ' ಕುರಿತು ಉಪನ್ಯಾಸ ನೀಡಿ ಸಹಜಮಾರ್ಗ ತತ್ವಜ್ಞಾನವನ್ನು ವಿವರಿಸಿದರು. ಸೋ. ಜಿ.ವಿ. ರವೀಂದ್ರರವರ ಹಿಂದಿ ಉಪನ್ಯಾಸದ ನಂತರ ನಡೆದ ಪರಸ್ಪರ ಚರ್ಚೆಯಲ್ಲಿ ಅನೇಕ ಸಂದೇಹಗಳು ಪರಿಹಾರವಾದವು.

ಸೋ. ಸಪ್ತಮುಖಿಲುರವರು ಎಲ್ಲಾ 150 ಭಾಗಿಗಳನ್ನು ವಿಶಾಖಪಟ್ನಂ ಆಶ್ರಮಕ್ಕೆ ಭೇಟಿ ನೀಡಲು ಆಹ್ವಾನಿಸಿದರು. ಸಹಜಮಾರ್ಗ ಸಾಧನೆಯೆಡೆ ಅನೇಕರು ಆಸಕ್ತಿ ತೋರಿದರು ಹಾಗೂ ಆಕಾಂಕ್ಷಿಗಳಿಗೆ ಪರಿಚಯಾತ್ಮಕ ಬೈಠಕುಗಳನ್ನು ನೀಡಲಾಯಿತು.



## ವಿಬಿಎಸ್ಇ ಕಾರ್ಯಕ್ರಮ, ವಡೋದರಾ

ವಡೋದರಾದ ವಿಬಿಎಸ್ಇ ಕಾರ್ಯಕರ್ತರು ಬರೋಡಾ ಪ್ರೌಢಶಾಲೆ,ಅಲ್ಕಾಪುರಿಯ 6ನೇ ಮತ್ತು 7ನೇ ತರಗತಿಯ ಮಕ್ಕಳಿಗಾಗಿ 'ತಂಡ ನಿರ್ಮಾಣ' ವಿಷಯದ ಮೇಲೆ 3 ಘಂಟೆಯ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಸಾಂಘಿಕ ಉತ್ಸಾಹದ ಪ್ರಾಮುಖ್ಯತೆಯನ್ನು ತಿಳಿಸಲು ಈ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ತಂಡ ನಿರ್ಮಾಣದ ಐದು ತತ್ವಗಳಾದ ವಚನಬದ್ಧತೆ, ಕೊಡುಗೆ, ಸಹಕಾರ, ಸಂವಹನ ಮತ್ತು ದ್ವಂದ್ವ ನಿರ್ವಹಣೆಗಳನ್ನು ಸೂಕ್ತ ಪ್ರಯೋಗಗಳು ಮತ್ತು ಪ್ರಸ್ತುತಿಗಳೊಡನೆ ವಿವರಿಸಲಾಯಿತು.

'ಬಾತುಗಳ ಹಾರಾಟ' ಪ್ರಸ್ತುತಿಯು ವಚನಬದ್ಧತೆಯನ್ನು ಪ್ರತಿಪಾದಿಸಿತು. ವಸ್ತುಗಳನ್ನು ನೆನಪಿಸಿಕೊಳ್ಳುವುದು ಮತ್ತು ಸಂವಹನದಲ್ಲಿ ದ್ವಿಮುಖ ಸಂವಹನದ ಪ್ರಾಮುಖ್ಯತೆಯನ್ನು ತೋರಿಸಲಾಯಿತು. 'ಸಾಧ್ಯವಾದಷ್ಟೂ ಗೆಲ್ಲಿ' ಆಟವನ್ನು ಆಡುವುದರ ಮೂಲಕ ಸಹಕಾರ ಮತ್ತು ಸಮಾನಗುರಿಯ ಪ್ರಾಮುಖ್ಯತೆಯನ್ನು ತೋರಿಸಲಾಯಿತು.

ವಿದ್ಯಾರ್ಥಿಗಳು ಪ್ರತೀ ಚಟುವಟಿಕೆಯಲ್ಲೂ ಏಕಾಗ್ರತೆಯಿಂದ ಮಗ್ನರಾಗಿ ಪಾಲ್ಗೊಂಡರು. ಶಾಲೆಯು ಕಾರ್ಯಕ್ರಮವನ್ನು ಅಭಿನಂದಿಸಿ ವಿದ್ಯಾರ್ಥಿಗಳಿಗಾಗಿ ಮತ್ತೂ ಹಲವು ವಿಷಯಗಳ ಮೇಲೆ ನಿಯಮಿತವಾಗಿ ಕಾರ್ಯಾಗಾರಗಳನ್ನು ನಡೆಸಿಕೊಡಲು ಆಹ್ವಾನಿಸಿದ್ದಾರೆ.

## ಪ್ರಶಿಕ್ಷಕರ ಕೂಟ, ನಾಟ್ಟರಂಪಳ್ಳಿ

7 ಮತ್ತು 8 ಜನವರಿಯಂದು ನಾಟ್ಟರಂಪಳ್ಳಿಯಲ್ಲಿ ತಮಿಳುನಾಡಿನ 55 ಪ್ರಶಿಕ್ಷಕರಿಗಾಗಿ ಸಭೆಯೊಂದನ್ನು ಆಯೋಜಿಸಲಾಗಿತ್ತು. ಸೋ.ಎ.ಪಿ.ದೊರೈ (ಜಂ.ಕಾರ್ಯದರ್ಶಿ) ಮತ್ತು ಸೋ. ಎಸ್.ಪ್ರಕಾಶ್(ವಲಯ ಪ್ರಮುಖರು) ರವರು ಕಾರ್ಯಕ್ರಮವನ್ನು ನಡೆಸಿ ಕೊಟ್ಟರು. ಸೋ. ಪ್ರಕಾಶ್‌ರವರು ಕೇಂದ್ರಗಳ ಪ್ರಗತಿಗಾಗಿ ಏನು ಮಾಡಬಹುದು ಮತ್ತು ಹೊಸ ಪ್ರಶಿಕ್ಷಕರ ಆಯ್ಕೆಯ ಅಳತೆಗೋಲುಗಳನ್ನು ವಿವರಿಸಿದರು. ಸೋ. ಎ.ಪಿ. ದೊರೈರವರು ಮಿಷನ್ನಿನ ಕೆಲಸಗಳಲ್ಲಿ ನಿರತರಾದ ಅಭ್ಯಾಸಿಗಳನ್ನು ಗುರುಗಳು ಗೌರವಿಸುತ್ತಾರೆ ಎಂದು ಹೇಳಿದರು. ಭಾವೀ ಪ್ರಶಿಕ್ಷಕ ಅಭ್ಯರ್ಥಿಗಳ ಸಾಮರ್ಥ್ಯವನ್ನು ಗುರುಗಳ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಸಾಧನೆಯಿಂದ ಅಳೆಯಬಹುದು. ಸೋ.ಪೆರುಮಾಳ್ (ನಿರ್ದೇಶಕರು, ಕ್ರೆಸ್ಟ್, ಬೆಂಗಳೂರು)ರವರು ತರಬೇತಿಯ ಅಗತ್ಯದ ಬಗ್ಗೆ ಮಾತನಾಡಿದರು ಮತ್ತು ಸೋ. ಎನ್.ಎಸ್. ನಾಗರಾಜರವರು 'ಮಿಷನ್ನಿನ ಪ್ರಗತಿ ಮತ್ತು ಅದರ ಸವಾಲುಗಳು' ಕುರಿತು ಮಾತನಾಡಿದರು.

ಸೋ. ಪ್ರಕಾಶ್‌ರವರು ಸ್ವರ್ಣಮೌನ ಸಮಯಾವಧಿಯಲ್ಲಿ ಅಂತರಂಗ ಪರಿಚಲನೆಗೆ ಸಹಾಯವಾಗುವಂತೆ ಹತ್ತು ಪ್ರಶ್ನೆಗಳನ್ನು ನೀಡಿದರು. 'ಚಾರಿತ್ರ್ಯ ನಿರ್ಮಾಣವನ್ನು ಇನ್ನೊಬ್ಬರಲ್ಲಿ ಹೇಗೆ ಮೂಡಿಸುವುದು', 'ಗೃಹ ಸಮಾವೇಶಗಳು ಮತ್ತು ಮುಕ್ತ ಸಭೆಗಳನ್ನು ನಡೆಸುವಾಗಿನ ಅನುಭವಗಳು', 'ಸಹಜಮಾರ್ಗದ ಬಗೆಗಿನ ಮೂಢನಂಬಿಕೆಗಳು ಮತ್ತು ಅವುಗಳನ್ನು ಹೇಗೆ ನಿರ್ನಾಮಗೊಳಿಸುವುದು', 'ಬೈಠಕುಗಳನ್ನು ನೀಡುವ ಹೊರತಾಗಿ ನಾವು ಗುರುಗಳಿಗಾಗಿ ಏನು ಮಾಡಬಹುದು' ಮತ್ತು ' ಒಬ್ಬ ಆದರ್ಶ ಅಭ್ಯಾಸಿ ಮತ್ತು ಆದರ್ಶ ಪ್ರಶಿಕ್ಷಕರನ್ನು ಹೇಗೆ ಕಾಣಬಹುದು' ಎಂಬ ಅನೇಕ ವಿಷಯಗಳನ್ನು ಚರ್ಚಿಸಲಾಯಿತು. ಪ್ರಶಿಕ್ಷಕರಿಗಾಗಿ ನಡೆಸಿದ ಎರಡು ಆಟಗಳು ಮೋಜುದಾಯಕ ಮತ್ತು ಹಾಸ್ಯಭರಿತವಾಗಿದ್ದವು. ಭಾಗಿಗಳ ನಡುವಿನ ಸಂಕೋಚವನ್ನು ಹೋಗಲಾಡಿಸಿ ಎಲ್ಲರನ್ನೂ ಒಂದುಗೂಡಿಸುವ ಅವಕಾಶವಾಯಿತು. ನಂತರದ ಪ್ರಶ್ನೋತ್ತರ ಕಾಲದಲ್ಲಿ ಐವರ ತಂಡವು ಉತ್ತರಿಸಿತು. ಕ್ರಿಕೆಟ್ ಆಟದೊಂದಿಗೆ ಸಭೆಯು ಮುಕ್ತಾಯವಾಯಿತು.

ಸಂಪುಟ 4 ಸಂಚಿಕೆ 2
ಮಾರ್ಚ್ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

## ವಿದ್ಯಾಲಯದ ವಿದ್ಯಾರ್ಥಿಗಳಿಗೆ ಭಾಷಣ – ಪಾಲಕ್ಕಾಡ್, ಕೇರಳ

ಸೋ. ರವೀಂದ್ರನಾಥನ್ ಮತ್ತು ಸೋ. ಮೋಹನ್‌ದಾಸ್ ಎ.ಕೆ. ರವರು ಮನ್ನಂಪಟ್ಟ, ಪಾಲಕ್ಕಾಡ್‌ನ ವಿ.ಟಿ.ಭಟ್ಟಾತಿರಿಪಾಡ್ ವಿದ್ಯಾಲಯದ ವಿದ್ಯಾರ್ಥಿಗಳಿಗೆ 27 ಡಿಸೆಂಬರ್ 2010ರಂದು 'ಧ್ಯಾನ' ಹಾಗೂ 'ಧ್ಯಾನದ ಅಗತ್ಯ ಮತ್ತು ಲಾಭ' ವಿಷಯಗಳನ್ನು ಸಹಜಮಾರ್ಗಕ್ಕೆ ಅನ್ವಯಿಸಿ ಮಾತನಾಡಿದರು.

ವ್ಯಕ್ತಿತ್ವ ಬೆಳವಣಿಗೆಯಲ್ಲಿ ಧ್ಯಾನದ ಪಾತ್ರ ಮತ್ತು ದೈನಂದಿನ ಜೀವನದಲ್ಲಿ ಏಕಾಗ್ರತೆ ಮತ್ತು ಶಿಸ್ತನ್ನು ಅಳವಡಿಸಿಕೊಳ್ಳುವ ಬಗ್ಗೆ ವಿವರವಾಗಿ ತಿಳಿಸಲಾಯಿತು. ಸೋ.ರವೀಂದ್ರನಾಥನ್‌ರವರು ಯುವಕರ ಅಧಿಕಾರ ಮತ್ತು ಜೀವನದಲ್ಲಿ ಗುರಿಯ ನಿಶ್ಚಯದ ಪ್ರಾಮುಖ್ಯತೆಯ ಬಗ್ಗೆ ಮಾತನಾಡಿದರು. ಅವರು ಯುವಕರು ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು, ಅಹಂಕಾರವನ್ನು ಬಿಟ್ಟು ಸೋಮಾರಿತನವನ್ನು ತೊಡೆಯಬೇಕು ಎಂದು ಒತ್ತಿ ಹೇಳಿದರು.

ಏಕಾಗ್ರತೆ, ಕೋಪದ ನಿಯಂತ್ರಣ ಮುಂತಾದವುಗಳ ಬಗೆಗೆ ಭಾಗಿಗಳಲ್ಲಿ ಎದ್ದ ಸಂದೇಹಗಳನ್ನು ನಿವಾರಿಸಲಾಯಿತು ಹಾಗೂ ಸೋ.ವಲ್ಸಕುಮಾರ್‌ರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು ಮತ್ತು ಮೊದಲನೇ ಬೈಠಕು ತೆಗೆದುಕೊಳ್ಳ ಬಯಸುವ ಭಾಗಿಗಳಿಗೆ ಅವರ ಸಂಪರ್ಕಮಾಹಿತಿಯನ್ನು ಒದಗಿಸಲಾಯಿತು.

## ಸಮೂಹ ಚರ್ಚೆ, ಮೊರಾದಾಬಾದ್

ಫೆಬ್ರುವರಿ 6ರಂದು ಮೊರಾದಾಬಾದ್‌ನ ಯೋಗಾಶ್ರಮದಲ್ಲಿ ಪೂರ್ಣದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸೋ. ಶ್ರವಣ್‌ರಿಂದ ಪ್ರಾರಂಭಿಸಲಾದ ಕಾರ್ಯಕ್ರಮದಲ್ಲಿ ಸುಮಾರು 50 ಅಭ್ಯಾಸಿಗಳು ಭಾಗವಹಿಸಿ 'ಚಾರಿತ್ರ್ಯ ನಿರ್ಮಾಣ'ದ ಕುರಿತು ಚರ್ಚೆ ನಡೆಸಿದರು. ಚಾರಿತ್ರ್ಯ ನಿರ್ಮಾಣದ ಎಲ್ಲಾ ಅಂಶಗಳನ್ನು ವಿಶದೀಕರಿಸಿ ವಿಷಯವನ್ನು ವಿವರವಾಗಿ ತಿಳಿಸಿಕೊಡಲಾಯಿತು. ಸೋ.ರಾಮ್, ಸೋ.ನೀಲಮ್ ಮತ್ತು ಸೋ.ಅಜಿತ್‌ರವರು ಕಾರ್ಯಕ್ರಮ ಮತ್ತು ಪ್ರಶ್ನೋತ್ತರಗಳನ್ನು ಉತ್ಸುಕತೆಯಿಂದ ನಿರ್ವಹಿಸಿದರು.

## ಶಿಕ್ಷಕ ಅಭಿವೃದ್ಧಿ ಕಾರ್ಯಕ್ರಮ, ಬೆಂಗಳೂರು

ಮಿಷನ್ನಿನ ಅನೇಕ ಚಟುವಟಿಕೆಗಳಾದ ಮುಕ್ತಸಭೆ, ವಿಬಿಎಸ್ಇ, ಸ್ವಾಗತ ಸ್ಥಳ, ಪ್ರಕಟಣೆಗಳು, ಯುವ ಕಾರ್ಯಕ್ರಮಗಳು ಮುಂತಾದವುಗಳಲ್ಲಿ ಭಾಗವಹಿಸಲು ಇಚ್ಛಿಸುವ ಅಭ್ಯಾಸಿಗಳಿಗಾಗಿ ಅವಕಾಶ ಕಲ್ಪಿಸಲು ಬೆಂಗಳೂರಿನಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಪ್ರಮುಖ ಅಂಶಗಳೆಂದರೆ– ಪ್ರೇಕ್ಷಕರಲ್ಲಿ ಮಾತನಾಡುವಾಗ ಅನುಸರಿಸಬೇಕಾದ ಸಾರಾಂಶ, ದೇಹಭಾಷೆ, ವಾಕ್‌ಶೈಲಿ, ಸ್ವರ ಇತ್ಯಾದಿಗಳು. ಕಾರ್ಯಕ್ರಮವನ್ನು ಮೂರು ತಿಂಗಳುಗಳಲ್ಲಿ ಮೂರು ಭಾಗಗಳನ್ನಾಗಿ ವಿಂಗಡಿಸಿ ಮೊದಲೆರಡು ಬನಶಂಕರಿಯಲ್ಲಿ ಆಯೋಜಿತವಾದರೆ ಕೊನೆಯ ಭಾಗವನ್ನು ಕ್ರೆಸ್ಟ್‌ನಲ್ಲಿ ವಸತಿಸಹಿತ ಕಾರ್ಯಕ್ರಮವನ್ನಾಗಿ ನಡೆಸಲಾಯಿತು.

ಅನೇಕ ಅನುಭವೀ ಉಪನ್ಯಾಸಕಾರರು ಅಮೂಲ್ಯ ಅಂಶಗಳನ್ನಲ್ಲದೆ ತಮ್ಮ ಅನುಭವಗಳನ್ನೂ ಹಂಚಿಕೊಂಡರು. ಭಾಗಿಗಳಿಗೆ ವಿಷಯಗಳನ್ನು ನಿಗದಿಗೊಳಿಸಲಾಗಿದ್ದು ಪ್ರತಿಯೊಬ್ಬರಿಗೂ 5–7 ನಿಮಿಷ ಮಾತನಾಡಲು ಹೇಳಲಾಯಿತು ಹಾಗೂ ನಂತರ ಯಾವ ಭಾಗದಲ್ಲಿ ಸುಧಾರಣೆಯಾಗಬೇಕೆಂದು ತಿಳಿಸಲಾಯಿತು. ಕ್ರೆಸ್ಟ್‌ನಲ್ಲಿ ನಡೆದ ಕೊನೆಯ ದಿನವು ಭಾಗಿಗಳು ತಂತಮ್ಮ ನಿಪುಣತೆಯನ್ನು ಆಯಾ ಕಾರ್ಯಗಳಲ್ಲಿ ವಿನಿಯೋಗಿಸುವುದರೊಂದಿಗೆ ಮುಕ್ತಾಯವಾಯಿತು.

ಇಂತಹ ಕಾರ್ಯಕ್ರಮಗಳು ಮಿಷನ್ನಿನ ಚಟುವಟಿಕೆಗಳಲ್ಲಿ ಅಭ್ಯಾಸಿಗಳು ಭಾಗವಹಿಸಲು ಅವಕಾಶ ಕಲ್ಪಿಸುತ್ತವೆ. ಅದಲ್ಲದೆ ಇದು ಅವರ ಸ್ವಯಂಪ್ರಗತಿ ಮತ್ತು ಗುರುಗಳ ಕೃಪೆಯಿಂದ ಮಿಷನ್ನಿನ ಪ್ರಗತಿಗೂ ಕೂಡ ಸಹಕರಿಸುತ್ತದೆ.

## ಯುವಜನರೆಡೆ ಕೇಂದ್ರಿತ, ಹೈದರಾಬಾದ್

ಜನವರಿ 8–9 ರಂದು 120 ಭಾಗಿಗಳಿಗಾಗಿ ಹೈದರಾಬಾದ್‌ನ ವಲಯಾಶ್ರಮದಲ್ಲಿ 'ಯುವಜನ ಕೂಟ' ನಡೆಯಿತು. ವಲಯ ಪ್ರಮುಖ ಸೋ. ಅನಂತ್‌ರವರು ನಾವು ಲೌಕಿಕ ಜೀವನದಲ್ಲಿ ಮಾಡುವುದೆಲ್ಲವೂ ನಮ್ಮ ಆಧ್ಯಾತ್ಮಿಕ ಬದುಕಿಗೆ ಒತ್ತಾಸೆಯಾಗಬೇಕೆಂದು ಹೇಳಿದರು.

'ಮಿಲಾನ್ ಯುವ ಕಾರ್ಯಾಗಾರ', 'ಚೇನಾದ ಸಭೆಗಳು'ಮತ್ತು ' ಆಧ್ಯಾತ್ಮ– ಶಾಂತಿ ಮತ್ತು ಭ್ರಾತೃತ್ವದ ನವ ಸಂಸ್ಕೃತಿ' ಯಂತಹ ಸಿ.ಡಿ.ಗಳನ್ನು ತೋರಿಸಲಾಯಿತು. ಭಾಗಿಗಳು ಆಟಗಳ ಜೊತೆಗೆ ಉತ್ಸುಕತೆಯಿಂದ ಸ್ವಯಂಸೇವೆಯನ್ನೂ ಸಹ ಮಾಡಿದರು.

ಬಾಬೂಜಿಯವರ ಜೀವನಾಧಾರಿತ ಚಿತ್ರ 'ಜರ್ನಿ ಇನ್ ಟೈಮ್–ಭಾಗ 1' ಭಾಗಿಗಳ ಹೃದಯ ತಟ್ಟಿತು. ಸೋ. ಅನಂತ್, ಸೋ.ಮಧುಮತಿ ಮತ್ತು ಸೋ. ಶ್ರೀನಿವಾಸರಾವ್‌ರವರು ಸಾಧನೆಯ ಬಗ್ಗೆ ಅನೇಕ ಅಂಶವುಳ್ಳ ಪ್ರಶ್ನೋತ್ತರ ಕಾರ್ಯಕ್ರಮ ನಡೆಸಿಕೊಟ್ಟರು. ಸೋ. ರಘುರವರು ಅನೇಕರಿಗೆ ತಿಳಿಯದ ಮಿಷನ್ನಿನ ಆಡಳಿತ ಮತ್ತು ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಈ ಅವಧಿಯಲ್ಲಿ ನಡೆದ ಆರು ಸತ್ಸಂಗಗಳು ಭಾಗಿಗಳನ್ನು ಆಧ್ಯಾತ್ಮಿಕ ಅನುಭೂತಿಯಲ್ಲಿ ಮುಳುಗಿರುವಂತೆ ಮಾಡಿದವು.

'ವಿಕಸನಕ್ಕಾಗಿ ತೊಡಗಿಸಿಕೊಳ್ಳು' ಯುವಕರ ಕಾರ್ಯಾಗಾರವನ್ನು 2011ರ ಫೆಬ್ರುವರಿ 11–13ರವರೆಗೆ ಭರವಸೆದಾಯಕ ಮತ್ತು ಉತ್ಸಾಹೀ 15 ತರುಣರ ತಂಡಕ್ಕಾಗಿ ನಡೆಸಲಾಯಿತು. ಇದರಲ್ಲಿ ಇಬ್ಬರ ನಡುವೆ ಆಲೋಚನೆಗಳ ವಿನಿಮಯದಿಂದ ಸ್ವಯಂಪರಿಶೀಲನೆ ಅವಧಿಯೊಡನೆ ಚಿಕ್ಕ ಗುಂಪುಗಳ ನಡುವೆ ಪರಸ್ಪರ ಚರ್ಚೆ, ಪ್ರತೀ ಭಾಗಿಗೂ ವೈಯಕ್ತಿಕ ಬೈಠಕು, ಪ್ರತೀ ಭಾಗಿಯೂ ಸರತಿಯಂತೆ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸುವಿಕೆ, ಶ್ರವಣ–ದೃಶ್ಯ ಅವಧಿಗಳು ಇದ್ದುದಲ್ಲದೆ ರಾತ್ರಿಯ ಭೋಜನದ ನಂತರ ಸುಂದರ ಚಲನಚಿತ್ರವೊಂದನ್ನು ತೋರಿಸಿದ್ದರಿಂದ ಭಾಗಿಗಳು ಸಂತಸಗೊಂಡರು.

ಪ್ರತೀ ಭಾಗಿಯೂ ತಮ್ಮಲ್ಲಾದ ಮಹತ್ವದ ಆಂತರಿಕ ಬದಲಾವಣೆಗಳು, ತಮ್ಮ ಪ್ರಗತಿಯಲ್ಲಿ ತಮ್ಮ ವೈಯಕ್ತಿಕ ಕೊಡುಗೆಯ ಕುರಿತು ವಿಶಾಲ ಮನೋಭಾವನೆ ಮತ್ತು ತಮ್ಮ ಸ್ವಂತ ವಿಕಸನಕ್ಕಾಗಿ ಪ್ರೇರೇಪಣೆಯ ಭಾವವನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಅವರೆಲ್ಲರ ಮುಖಗಳು ಆತ್ಮವಿಕಸನಕ್ಕಾಗಿ ಮಾಡಿದ ದೃಢಸಂಕಲ್ಪದಿಂದ ಕಂಗೊಳಿಸುವುದನ್ನು ಕಾಣಬಹುದಾಗಿತ್ತು. ಎರಡೂ ಕಾರ್ಯಕ್ರಮದ ಪ್ರತಿಕ್ರಿಯೆ ಧನಾತ್ಮಕವಾಗಿತ್ತು. ಭಾಗಿಗಳೆಲ್ಲರೂ ತಾವು ಇಂತಹ ಕಾರ್ಯಕ್ರಮದಲ್ಲಿ ಇನ್ನು ಮುಂದೆಯೂ ಪಾಲ್ಗೊಳ್ಳಲು ಎದುರುನೋಡುತ್ತಿದ್ದೇವೆಂದು ಹೇಳಿದರು.





ಸಂಪುಟ 4 ಸಂಚಿಕೆ 2 ಮಾರ್ಚ್ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

## ಭುವನೇಶ್ವರದಲ್ಲಿ ಸೋದರಿಯರ ಉಪಕ್ರಮ

ಭುವನೇಶ್ವರದ ಅಭ್ಯಾಸಿ ಸೋದರಿಯರು ಅಕ್ಟೋಬರ್ 2010ರಿಂದ ತಿಂಗಳಿಗೊಮ್ಮೆ ಭೇಟಿಯಾಗುತ್ತಿದ್ದಾರೆ. ಇಲ್ಲಿಯ ತನಕ ಅವರು ನಾಲ್ಕು ಬಾರಿ ಸೇರಿದ್ದು ಪ್ರತೀ ಬಾರಿ ಒಬ್ಬ ಪ್ರಶಿಕ್ಷಕ ಸೋದರಿಯೂ ಹಾಜರಿರುವಂತೆ ನೋಡಿಕೊಳ್ಳುತ್ತಿದ್ದಾರೆ. ಅವರು ಸಹಜಮಾರ್ಗದ ಪ್ರಮುಖ ಸಿದ್ಧಾಂತವೊಂದನ್ನು ಆಯ್ಕೆಮಾಡಿ ತಮ್ಮ ವಿಚಾರ/ಅನುಭವಗಳನ್ನು ವ್ಯಕ್ತಪಡಿಸುತ್ತಾರೆ ಹಾಗೂ ಸಂದೇಹಗಳೇನಾದರೂ ಇದ್ದಲ್ಲಿ ಪ್ರಶಿಕ್ಷಕರು ನಿವಾರಿಸುತ್ತಾರೆ. ಮೊದಲ ನಾಲ್ಕು ಸಭೆಗಳಲ್ಲಿ ಧ್ಯಾನ, ಶುದ್ಧೀಕರಣ, ಪ್ರಾರ್ಥನೆ ಮತ್ತು ಆಶ್ರಮ ಇವುಗಳನ್ನು ಚರ್ಚಿಸಲಾಯಿತು. ಇಂತಹ ಪಾರಸ್ಪರಿಕ ಚರ್ಚೆಗಳು ಅಭ್ಯಾಸಿ ಸೋದರಿಯರಲ್ಲಿ ಸಾಧನೆಯ ವಿವಿಧ ಕೋನಗಳು ಸ್ಪಷ್ಟವಾಗಲು ಸಹಕಾರಿ ಮತ್ತು ಇದು ಅವರು ಪೂರ್ಣದಿನದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಹಾಯ ಮಾಡುತ್ತದೆ.

ಸೋದರಿಯರು ಕೇಂದ್ರದ ಪಾಕಶಾಲೆಯನ್ನು ಮರುವ್ಯವಸ್ಥಿತಗೊಳಿಸಿದ ತರುವಾಯ ಭಾನುವಾರದಂದು ಸತ್ಸಂಗದ ನಂತರ ಉಪಾಹಾರವನ್ನು ನೀಡಲಾಗುತ್ತಿದೆ.

ಕಳೆದ ಮೂರು ತಿಂಗಳುಗಳಿಂದ ಪ್ರತೀ ಪೂರ್ಣದಿನದ ಕಾರ್ಯಕ್ರಮದಂದು ಚರ್ಚೆ ಮುಗಿದ ನಂತರ ಎಲ್ಲಾ ಅಭ್ಯಾಸಿಗಳು ಅರ್ಧ ಘಂಟೆಯ ಮೌನಾಚರಣೆ ಮಾಡುತ್ತಾರೆ. ಹಾಗಿರುವಾಗ ಅವರು ಕೇಂದ್ರದ ಕೆಲಸ ಮಾಡುತ್ತಲೋ, ಪುಸ್ತಕಗಳನ್ನು ಓದುತ್ತಲೋ ಅಥವಾ ಹಾಗೇ ಕಣ್ತೆರೆದು ಕುಳಿತುಕೊಳ್ಳುತ್ತಾರೆ. ಈ ವಿಧಾನವು ಅವರಿಗೆ ಪ್ರಿಯವಾದ್ದರಿಂದ ಅವರೆಲ್ಲರೂ ಇಂತಹ ಮೌನಾಚರಣೆಯನ್ನು ಎದುರು ನೋಡುತ್ತಾರೆ.

## 'ಡೈಲಿ ರಿಫ್ಲೆಕ್ಷನ್ಸ್' ಬಗೆಗೆ ಉಪಕ್ರಮ

ಡೈಲಿ ರಿಫ್ಲೆಕ್ಷನ್ಸ್ ಪ್ರತಿದಿನ ನಮ್ಮ ಗುರುಗಳ ಉಲ್ಲೇಖವನ್ನು ಅದರ ಚಂದಾದಾರರಿಗೆ ಈಮೇಲ್ ಮೂಲಕ ಕಳಿಸುವ ನಮ್ಮ ಮಿಷನ್ನಿನ ಉಚಿತ ಈಮೇಲ್ ಸೇವೆಯಾಗಿದೆ. ಇದರ ಅರಿವು ಮೂಡಿಸಲು ಜನವರಿ 17ರಂದು ಮಧ್ಯಪ್ರದೇಶದ ವಿದಿಶಾದಲ್ಲಿ ಪೂರ್ಣದಿನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

25 ದಿನಗಳವರೆಗೆ ಅಭ್ಯಾಸಿಗಳ ತಂಡವೊಂದು ಪ್ರತಿದಿನ ಡೈಲಿ ರಿಫ್ಲೆಕ್ಷನ್ಸ್ ಅನ್ನು ಮಿಷನ್ನಿನ ಸಾಹಿತ್ಯದಲ್ಲಿನ ಹಿಂದಿ ತರ್ಜುಮೆಯೊಂದಿಗೆ ಓದುತ್ತಿತ್ತು. ಪ್ರತಿಯೊಬ್ಬ ಅಭ್ಯಾಸಿಗೂ ಒಂದು ಸಂದೇಶ ನೀಡಲಾಯಿತು ಹಾಗೂ ಅವರು ಆತ್ಮ ಪರಿಶೀಲನೆ ನಡೆಸಿ, ತಮ್ಮ ಸಾಧನೆ, ನಡತೆ, ವರ್ತನೆಯನ್ನು ಮೌಲ್ಯೀಕರಿಸಿ ಎಲ್ಲರೊಡನೆ ಹಂಚಿಕೊಂಡರು.

ತರಹಾವರಿ ವಿಷಯಗಳಾದ ಮೌನದ ಸ್ವರ, ಮೌನ, ಸಮಯ, ಸಂಸ್ಕಾರ, ಮುದ್ರೆಗಳು, ಮಿಷನ್, ಭಗವಂತನ ಅನುಭವ ಪಡೆ, ನಾನು, ಮಕ್ಕಳು, ಮನಸ್ಸು, ಆಶ್ರಮಗಳು, ಕೆಲಸ ಹೇಗೆ ಮಾಡಬೇಕು, ನಮ್ಮ ಭೇಟಿ, ಧರ್ಮ ಮತ್ತು ಆಧ್ಯಾತ್ಮ ಹಾಗೂ ಪ್ರಗತಿಗಳನ್ನು ಚರ್ಚಿಸಲಾಯಿತು. ಅಭ್ಯಾಸಿ ಸೋದರ ಸೋದರಿಯರ ಪ್ರತಿಕ್ರಿಯೆ ಚೆನ್ನಾಗಿ ಮೂಡಿಬಂದಿತು. ಈ ಕಾರ್ಯಕ್ರಮವು ಕೇಂದ್ರದ ಅಭ್ಯಾಸಿಗಳು ಡೈಲಿ ರಿಫ್ಲೆಕ್ಷನ್ಸ್ ಅನ್ನು ಓದುವಂತೆ ಪ್ರೇರೇಪಿಸಲು ಸಹಕಾರಿಯಾಯಿತು.

## ಅಭ್ಯಾಸಿ ತರಬೇತು ಕಾರ್ಯಕ್ರಮ

ಅಭ್ಯಾಸಿ ತರಬೇತು ಕಾರ್ಯಕ್ರಮಗಳನ್ನು ಭಾರತದ ಅನೇಕ ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ. ಈ ಕಾರ್ಯಕ್ರಮದ ಉದ್ದೇಶವು ಸಹಜಮಾರ್ಗ ಸಾಧನೆಯ ಉತ್ತಮ ಅರಿವು ಮೂಡಿಸುವುದು ಮತ್ತು ಅಭ್ಯಾಸಿಗಳು ತಮ್ಮ ಸಾಧನೆಯ ಬಗ್ಗೆ ಸಂದೇಹ ಹೊಂದಿದ್ದರೆ ಅವುಗಳ ನಿವಾರಣೆ ಮಾಡುವುದಾಗಿದೆ. ಕಾರ್ಯಕ್ರಮದಲ್ಲಿ ಧ್ಯಾನ, ಶುದ್ಧೀಕರಣ, ಹತ್ತು ನಿಯಮಗಳು, ಪ್ರಾರ್ಥನೆ ಮತ್ತು ಸತತ ಸ್ಮರಣೆಗಳನ್ನು ವಿವರಿಸುತ್ತದೆ. ಪ್ರಸ್ತುತಿಯ ನಂತರದ ಪ್ರಶ್ನೋತ್ತರವು ಅನೇಕ ಸಂದೇಹಗಳನ್ನು ನಿವಾರಿಸುತ್ತದೆ. ಈ ಕೆಳಗಿನ ಕೇಂದ್ರಗಳು ಅಭ್ಯಾಸಿ ತರಬೇತು ಕಾರ್ಯಕ್ರಮಗಳನ್ನು ನಡೆಸಿದಾಗ ದೊರೆತ ಭಾಗಿಗಳ ಪ್ರತಿಕ್ರಿಯೆ ಪ್ರೇರಣಾದಾಯಕವಾಗಿತ್ತು. ಈ ಕಾರ್ಯಕ್ರಮವು ತಮ್ಮ ಸಾಧನೆಯನ್ನು ಸರಿಯಾದ ಮನೋವೃತ್ತಿಯೊಡನೆ ಮಾಡಲು ಸಹಾಯಕವೆಂದೂ ಮತ್ತು ಸಾಧನೆ ಮಾಡಲು ತಮಗೆ ಪ್ರೇರಣೆಯಾಗುವುದೆಂದೂ ಅಭಿಪ್ರಾಯ ಪಟ್ಟರು. ಎಲ್ಲಾ ಅಭ್ಯಾಸಿಗಳಿಗಾಗಿ ಆಗಾಗ ಇಂತಹ ತರಬೇತು ಕಾರ್ಯಕ್ರಮಗಳನ್ನು ನಡೆಸಿಕೊಡಬೇಕೆಂದು ಅವರು ಹೇಳಿದರು.


ವಲ್ಸಾಡ್


ಗುಲ್ಬರ್ಗ


ರಾಯಚೂರು


ಮುಂಬಯಿ

### ವಲ್ಸಾಡ್, ಗುಜರಾತ್

ವಲ್ಸಾಡ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭರುಚ್, ಸೂರತ್, ನವ್ಸಾರಿ, ವಾಪಿ, ಖೇರ್ಗಾಂವ್, ಕಿಲ್ಲಾ ಪಾರ್ಡಿ ಮತ್ತು ವಲ್ಸಾಡ್ ಕೇಂದ್ರಗಳ ಇಪ್ಪತ್ನಾಲ್ಕು ಅಭ್ಯಾಸಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಗುಜರಾತಿಯಲ್ಲಿ ನಡೆಸಲಾಯಿತು.

### ಗುಲ್ಬರ್ಗಾ, ಉ.ಕರ್ನಾಟಕ

ಜನವರಿ 2, 2011ರಂದು ಗುಲ್ಬರ್ಗಾ ಆಶ್ರಮದಲ್ಲಿ ಸೋ. ಪ್ರಹ್ಲಾದ್ ಪಾಕಣೀಕರ್‌ರವರು ನಡೆಸಿಕೊಟ್ಟ ತರಬೇತು ಕಾರ್ಯಕ್ರಮದಲ್ಲಿ ನಲವತ್ತು ಅಭ್ಯಾಸಿಗಳು ಪಾಲ್ಗೊಂಡಿದ್ದರು.

### ರಾಯಚೂರು, ಉ.ಕರ್ನಾಟಕ

ಸೋ. ಪ್ರಹ್ಲಾದ್ ಪಾಕಣೀಕರ್ ಮತ್ತು ಸೋ. ನಿಜಲಿಂಗಪ್ಪರವರು ಜನವರಿ 9, 2011ರಂದು ರಾಯಚೂರು ಆಶ್ರಮದಲ್ಲಿ ಸುಮಾರು ನಲವತ್ತು ಅಭ್ಯಾಸಿಗಳಿಗಾಗಿ ಕಾರ್ಯಕ್ರಮ ನಡೆಸಿಕೊಟ್ಟರು.

### ಖರ್ಘರ್, ನವಿ ಮುಂಬಯಿ

ಸೋ. ನಂದಿತಾ ಮಾಥುರ್‌ರವರು ಹದಿನೈದು ಅಭ್ಯಾಸಿಗಳಿಗಾಗಿ ಕಾರ್ಯಕ್ರಮವನ್ನು ಅಭ್ಯಾಸಿ ಸೋದರಿಯೊಬ್ಬರ ಮನೆಯಲ್ಲಿ ನಡೆಸಿಕೊಟ್ಟರು.

### ಜೋಗೇಶ್ವರಿ, ಮುಂಬಯಿ

ಸೋ. ಸುನಿತಾರವರು ನಡೆಸಿಕೊಟ್ಟ ಕಾರ್ಯಕ್ರಮದಲ್ಲಿ ಹನ್ನೊಂದು ಅಭ್ಯಾಸಿಗಳು ಪಾಲ್ಗೊಂಡರು.

ಸಂಪುಟ 4 ಸಂಚಿಕೆ 2
ಶ್ರೀ ರಾಮಚಂದ್ರ ಮಿಷನ್®
ಎಕ್ರೋಸ್ ಇಂಡಿಯಾ ವಾರ್ತಾಪತ್ರ
ಮಾರ್ಚ್ 2011

# ಪ್ರಬಂಧ ಸ್ಪರ್ಧೆ 2010 ಪ್ರಮಾಣಪತ್ರ ಹಂಚಿಕೆ



ಪರಮಕುಡಿ




ಅಲಹಬಾದ್



ನಹರ್ಲಾಗುನ್

ಮುಂಬರುವ ಪೀಳಿಗೆಯಲ್ಲಿ ವ್ಯಕ್ತಿಗತ ಬದಲಾವಣೆ ತರಲು ಸಹಜಮಾರ್ಗದ ಮೌಲ್ಯಗಳಾದ ಸಾರ್ವತ್ರಿಕ ಪ್ರೇಮ, ಭ್ರಾತೃತ್ವ ಮತ್ತು ಮನುಕುಲ ಏಕತೆಯಂತಹ ಬೀಜಗಳನ್ನು ಅವರ ಹೃದಯಗಳಲ್ಲಿ ಬಿತ್ತುವುದಲ್ಲದೆ ಅವರು ಜೀವನಧರ್ಮ ಮತ್ತು ನೈತಿಕ ಬುನಾದಿಗಳನ್ನು ಅರಿಯಲು ಅಖಿಲ ಭಾರತ ಪ್ರಬಂಧ ಲೇಖನ ಸ್ಪರ್ಧೆಯನ್ನು ಪ್ರತೀ ವರ್ಷ ನಡೆಸಲಾಗುತ್ತದೆ. ಈ ವರ್ಷ ಸುಮಾರು 11,500 ಶೈಕ್ಷಣಿಕ ಸಂಸ್ಥೆಗಳಿಂದ ವಿವಿಧ ವಯೋಮಾನದ ಮೂರು ತಂಡದಂತೆ 50,000 ವಿದ್ಯಾರ್ಥಿಗಳು ಈ ಕೆಳಕಂಡ ವಿಷಯಗಳ ಕುರಿತು ಪ್ರಬಂಧ ಬರೆದರು.

❖ಚಾರಿತ್ರ್ಯ ಜೀವನವನ್ನು ಸುರಕ್ಷಿತಗೊಳಿಸುತ್ತದೆ

❖ಸ್ವಾತಂತ್ರ್ಯವೆಂದರೆ ಪರವಾನಿಗೆಯಲ್ಲ, ಆದರೆ ತನಗೆ ಯಾವುದು ಒಳಿತೋ ಅದನ್ನು ಆರಿಸುವ ವಿವೇಕ

❖ಮಹತ್ವಾಕಾಂಕ್ಷೆಯಿಂದ ಆಕಾಂಕ್ಷೆಯೆಡೆಗೆ, ಪ್ರಾಪ್ತಿಯಿಂದ ಆಗುವುದರೆಡೆಗೆ

ಪ್ರಬಂಧಗಳ ಮೌಲ್ಯಮಾಪನದ ನಂತರ ಕೇಂದ್ರಗಳಲ್ಲಿ ಏರ್ಪಡಿಸಿದ ಬಹುಮಾನ ವಿತರಣೆ ಸಮಾರಂಭದಂದು ಆಹ್ವಾನಿತರಾದ ಪಾಲಕರು ಮತ್ತು ಶಿಕ್ಷಕರ ಉಪಸ್ಥಿತಿಯಲ್ಲಿ ಬರಹಗಾರರಿಗೆ ಪ್ರಮಾಣಪತ್ರ ಹಂಚಲಾಯಿತು.

## ಮಧ್ಯಪ್ರದೇಶ

ಪೂರ್ಣ ಮಧ್ಯಪ್ರದೇಶ ವಲಯದಲ್ಲಿ ಜನವರಿ 23ರಂದು ಏಕಕಾಲದಲ್ಲಿ ಮುಕ್ತಸಭೆಯೊಂದಿಗೆ ವಿದ್ಯಾರ್ಥಿಗಳನ್ನು ಬಹುಮಾನಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಬಹುಮಾನ ವಿತರಣೆಯ ನಂತರ 'ಜೀವನದಲ್ಲಿ ಮೌಲ್ಯಗಳ ಪಾಮುಖ್ಯತೆ' ಕುರಿತು ಸಣ್ಣ ಉಪನ್ಯಾಸ ನೀಡಲಾಯಿತು. ಕೊನೆಯಲ್ಲಿ ಮಿಷನ್ ಮತ್ತು ಆಧ್ಯಾತ್ಮದ ಲಘು ಪರಿಚಯ ನೀಡಲಾಯಿತು. ಪರಿಣಾಮವಾಗಿ ಬಹಳಷ್ಟು ಜನ ಮಿಷನ್ ಸೇರಲು ಆಸಕ್ತಿ ತೋರಿದರು.

## ಅರುಣಾಚಲ ಪ್ರದೇಶ

ಪೂರ್ವೋತ್ತರ ರಾಜ್ಯಗಳಲ್ಲಿನ ಶಿಲ್ಲಾಂಗ್(ಮೇಘಾಲಯ), ಇಂಫಾಲ್, ಸಿ.ಸಿ.ಪುರ(ಮಣಿಪುರ) ಒಳಗೊಂಡಂತೆ ಅರುಣಾಚಲಪ್ರದೇಶದ 53 ಶೈಕ್ಷಣಿಕ ಸಂಸ್ಥೆಗಳಿಂದ ಸುಮಾರು 350 ವಿದ್ಯಾರ್ಥಿಗಳು ಭಾಗವಹಿಸಿದ್ದರು. ನಹರ್ಲಾಗುನ್ ಆಶ್ರಮದಲ್ಲಿ ಜನವರಿ 30ರಂದು ಆಯೋಜಿಸಿದ್ದ ಬಹುಮಾನ ವಿತರಣೆ ಸಮಾರಂಭದಲ್ಲಿ ಸುಮಾರು 150 ಭಾಗಿಗಳು ಪಾಲ್ಗೊಂಡಿದ್ದರು. ವಲಯ ಮಟ್ಟದ ಮತ್ತು ಶಾಲಾಮಟ್ಟದ ಪ್ರಮಾಣಪತ್ರವನ್ನು ಜಯಶಾಲಿಗಳಿಗೆ ವಿತರಿಸಲಾಯಿತು. ಗುರುಗಳ ವಿಡಿಯೋ ಸಂದೇಶ ( ಯುವಕರಿಗಾಗಿ ಸಂದೇಶ, ಅಕ್ಟೋಬರ್ 16, 2009– ದುಬೈ) ವನ್ನು ತೋರಿಸಲಾಯಿತು. ವಲಯಮಟ್ಟದ ವಿಜಯಿಗಳು ತಮ್ಮ ಅನುಭವವನ್ನು ಹಂಚಿಕೊಂಡರು.

## ತಮಿಳುನಾಡು

ಫೆಬ್ರುವರಿ 5ರಂದು ಗುಡಲೂರಿನ ಸೆಂಟ್ ಥಾಮಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಮೊದಲನೇ ಕಾರ್ಯಕ್ರಮವನ್ನು ನಡೆಸಲಾಯಿತು. ಗುಡಲೂರಿನಂತಹ ದೂರದೂರಿನಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸಿದ್ದಕ್ಕೆ ಭಾಗಿಗಳು ಅಭಿನಂದಿಸಿದರು.

6ನೇ ತಾರೀಖಿನಂದು ಊಟಿಯಲ್ಲಿ 100 ಭಾಗಿಗಳೊಂದಿಗೆ ಕಾರ್ಯಕ್ರಮ ನಡೆಸಲಾಯಿತು. ಎರಡೂ ಸಂದರ್ಭಗಳಲ್ಲಿ ಸೋ. ವಿಶ್ವನಾಥ್ (ವಲಯ ಪ್ರಮುಖ) ಮತ್ತು ಸೋ. ಎಂ.ಎಂ.ಧಾನುಮೂರ್ತಿಯವರು ಸಹಜಮಾರ್ಗದ ಬಗ್ಗೆ ಮಾತನಾಡಿದರು. ಕೆಲವು ವಿಜಯಿಗಳು ಮತ್ತು ಶಾಲಾ ಪ್ರಾಂಶುಪಾಲರೂ ಸಹ ತಮ್ಮ ಅನುಭವಗಳ ಬಗ್ಗೆ ಮಾತನಾಡಿದರು.

ಫೆಬ್ರುವರಿ 13ರಂದು ಅವಿನಾಶಿ ಕೇಂದ್ರದಲ್ಲಿ ಪುಲಿಯಂಪಟ್ಟಿ ಮತ್ತು ಅವಿನಾಶಿಯ ಇಪ್ಪತ್ತು ಶಾಲೆಗಳ ಇಪ್ಪತ್ತು ವಿಜಯಿಗಳಿಗಾಗಿ ಕಾರ್ಯಕ್ರಮ ನಡೆಸಲಾಯಿತು. ಸುಮಾರು ಅರವತ್ತು ಆಹ್ವಾನಿತರು ಹಾಜರಿದ್ದರು. ಸೋ. ಟಿ.ವಿ.ವಿಶ್ವನಾಥರವರು ಇಂತಹ ಪ್ರಬಂಧ ಬರಹಗಳಿಂದ ವಿದ್ಯಾರ್ಥಿಗಳನ್ನು ಗುಣವಂತರನ್ನಾಗಿ ಮಾಡುವ ಮಿಷನ್ನಿನ ಉದ್ದೇಶವನ್ನು ಕುರಿತು ಮಾತನಾಡಿದರು. ಸೋ. ಶೇಷ ಮಣಿಕಂಠನ್‌ರವರು ಇಂದಿನ ಒತ್ತಡಭರಿತ ಜಗತ್ತಿನಲ್ಲಿ ಧ್ಯಾನದ ಅಗತ್ಯದ ಬಗ್ಗೆ ಉಪನ್ಯಾಸ ನೀಡಿದರು.

ಪರಮಕುಡಿ ಕೇಂದ್ರದಲ್ಲಿ ಫೆಬ್ರುವರಿ 6ರಂದು ನಡೆದ ಸ್ಪರ್ಧೆಯಲ್ಲಿ ಒಂಬತ್ತು ಶಾಲೆ ಮತ್ತು ಎರಡು ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದಾಗ ಎಲ್ಲಾ ವಿಭಾಗಗಳಲ್ಲಿ ಹದಿನಾಲ್ಕು ವಿದ್ಯಾರ್ಥಿಗಳು ವಿಜೇತರಾದರು.

ಸೋ. ಕಣ್ಣನ್ ಮತ್ತು ಸೋ. ಮುರುಗನ್‌ರವರು ನಮ್ಮ ನಡತೆಯ ಬೆಳವಣಿಗೆಯ ಕಡೆ ಒಳನೋಟ ಹರಿಸಲು ಈ ಪ್ರಬಂಧ ಬರಹವು ಸಹಾಯ ಮಾಡುತ್ತದೆ ಎಂಬುವ ಬಗ್ಗೆ ಮಾತನಾಡಿದರು. ಸಹಜಮಾರ್ಗ ಸಾಧನೆ ಹಾಗೂ ಲೌಕಿಕ ಮತ್ತು ಆಧ್ಯಾತ್ಮಿಕ ಜೀವನದಲ್ಲಿ ಅದರ ಲಾಭಗಳ ಕುರಿತು ಉಪನ್ಯಾಸಗಳಿದ್ದವು. ಪಾಲ್ಗೊಂಡ ಶಿಕ್ಷಕರಿಗೆ ಸಹಜಮಾರ್ಗದ ಪುಸ್ತಕಗಳನ್ನು ನೀಡಲಾಯಿತು. ಕೆಲವು ಶಿಕ್ಷಕರು ಮತ್ತು ವಿಜೇತರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

## ಆಂಧ್ರಪ್ರದೇಶ

ದಿ. 6 ನೇ ಫೆಬ್ರುವರಿ 2011ರಂದು, ವಿಶಾಖಪಟ್ಟಣದ ಆಶ್ರಮದಲ್ಲಿ ವಿವಿಧ ಸಂಸ್ಥೆಗಳಿಂದ ವಿದ್ಯಾರ್ಥಿಗಳು, ಪಾಲಕರು, ಪ್ರಾಂಶುಪಾಲರು, ಪ್ರಾಧ್ಯಾಪಕರು ಮತ್ತು ಉಪನ್ಯಾಸಕರು ಸೇರಿ ಒಟ್ಟು ಸುಮಾರು 500 ಜನರು ಒಂದುಗೂಡಿದ್ದರು. ಈ ಸ್ಪರ್ಧೆಯಲ್ಲಿ ಭಾಗವಹಿಸಿದ ಸುಮಾರು 10,000 ಜನರಲ್ಲಿ 160 ಜನರನ್ನು ವಿಜೇತರೆಂದು ಘೋಷಿಸಲಾಗಿತ್ತು.

ಕೇಂದ್ರ ಪ್ರಮುಖರಾದ ಸಹೋದರ ಗೋಪಾಲರಾವ ಅವರು ಪ್ರಶಿಕ್ಷಕರಾದ ಸೋ.




ಊಟಿ



ಅವಿನಾಶಿಯ



ಇಂದೋರ್



ತೀನಸುಖಿಯಾ


ಹೈದರಾಬಾದ್


ರಾಂಚಿ

ವಿ.ಆರ್.ಎಸ್.ಎನ್.ಶರ್ಮಾರವರು ಹಾಗು ಸೋ.ಪಿ.ವಿ.ಜಿ.ಕೆಮೂರ್ತಿಯವರು ಅಧ್ಯಾತ್ಮಿಕ ಜೀವನದ ಮಹತ್ವ, ಜನರಲ್ಲಿ ಅಧ್ಯಾತ್ಮದ ಬಗ್ಗೆ ತಿಳುವಳಿಕೆ ಹುಟ್ಟಿಸುವುದು, ಚಾರಿತ್ರ್ಯ ನಿರ್ಮಾಣ, ಮಾನವತೆಯ ಮೌಲ್ಯಗಳು ಮತ್ತು ಮೌಲ್ಯಾಧಾರಿತ ಶಿಕ್ಷಣ ಎಂಬ ವಿಷಯಗಳ ಬಗ್ಗೆ ಮಾತನಾಡಿದರು. ಈ ವಲಯದಲ್ಲಿಯ ಒಂಬತ್ತು ಸ್ಪರ್ಧಕರು ರಾಷ್ಟ್ರೀಯ ಸ್ತರದಲ್ಲಿ ವಿಜೇತರಾಗಿದ್ದಾರೆ.

ಹೈದರಾಬಾದಿನಲ್ಲಿಯ ತುಮಕುಂಟಾ ಆಶ್ರಮದಲ್ಲಿ ದಿ.6ನೇ ಫೆಬ್ರುವರಿಯಂದು ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗಿತ್ತು. ಸುಮಾರು 250 ವಿದ್ಯಾ ಸಂಸ್ಥೆಗಳಿಂದ ಸುಮಾರು 4000 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಸೋ.ಮಧುಮತಿಯವರು ಈ ಸಭೆಯಲ್ಲಿ ಮಾತನಾಡಿದರು. ಸೋ.ಅನಂತ (ವಲಯ ಪ್ರಮುಖರು) ಸೋ.ಶ್ರೀನಿವಾಸರಾವ (ಕೇಂದ್ರ ಪ್ರಮುಖರು) ಮತ್ತು ಸಂಯುಕ್ತ ರಾಷ್ಟ್ರದ ಪ್ರತಿನಿಧಿ ಡಾ. ಕಮಲರಾಜರವರು ಬಹುಮಾನ ಮತ್ತು ಪ್ರಶಸ್ತಿಪತ್ರಗಳನ್ನು ಹಂಚಿದರು. ಶಾಲೆ, ವಲಯ ಮತ್ತು ರಾಷ್ಟ್ರೀಯ ಸ್ತರ ಗಳಲ್ಲಿಯ ವಿಜೇತರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಗೀತಾಂಜಲಿ ದೇವಾಶ್ರಯ ಶಾಲೆಯ ನವನೀತಕೃಷ್ಣನು ರಾಷ್ಟ್ರೀಯ ಸ್ತರದಲ್ಲಿಯ ಪ್ರಥಮ ವಿಭಾಗದ ಎರಡನೇಯ ವಿಜೇತ ಪದವನ್ನು ಪಡೆದಿದ್ದಾನೆ. ಸ್ವಾಗತ ಕಕ್ಷವು ಇಡೀದಿನ ನಿರತವಾಗಿದ್ದು ಸಹಜಮಾರ್ಗದ ಬಗ್ಗೆ ಮಾಹಿತಿಪಡೆಯಲು ಇಚ್ಛಿಸಿದ ಅತಿಥಿಗಳನ್ನು ಸ್ವಾಗತಿಸಿತು.

## ರಾಂಚಿ

ವಲಯ ಸ್ತರದ ಬಹುಮಾನ ಹಾಗು ಪ್ರಶಸ್ತಿಪತ್ರಗಳನ್ನು ರಾಂಚಿ ರೋಟರಿ ಹಾಲ್ ನಲ್ಲಿ ಮುಖ್ಯ ಅತಿಥಿಗಳು, ಜಾರ್ಖಂಡ ರಾಜ್ಯದ ಕೇಂದ್ರೀಯ ವಿಶ್ವವಿದ್ಯಾಲಯದ ರಿಜಿಸ್ಟ್ರಾರರು ಆದ ಡಾ. ಶ್ಯಾಮನಾರಾಯಣರವರಿಂದ 30 ಕ್ಕೂ ಹೆಚ್ಚು ಮಕ್ಕಳಿಗೆ ಹಂಚಲಾಯಿತು. ಸೋ.ಮನೋಜ ತಿವಾರಿಯವರು ನಿಬಂಧ ಸ್ಪರ್ಧೆಗಳನ್ನು ಆಯೋಜಿಸುವ ಉದ್ದೇಶದ ಬಗ್ಗೆ ಮಾತನಾಡಿದರು. ವಿವಿಧ ಶಾಲೆಗಳಿಂದ ಬಂದ ಸಹಭಾಗಿಗಳು, ಈ ಸ್ಪರ್ಧೆಗಳಿಗಾಗಿ ಸಿದ್ಧತೆ ಮಾಡುವಾಗಿನ ತಮ್ಮ ಅನುಭವ ಹಾಗು ಜೀವನದ ಪ್ರವಾಸ ಹಾಗು ಉದ್ದೇಶಗಳ ಬಗ್ಗೆ ತಮಗಿದ್ದ ತಿಳುವಳಿಕೆಯಲ್ಲಿ ಹೇಗೆ ಬದಲಾವಣೆ ಯಾಗಿದೆ ಎಂಬುದಾಗಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಮುಖ್ಯ ಅತಿಥಿಗಳು ಚಾರಿತ್ರ್ಯವು ಹೇಗೆ ನಮ್ಮ ಜೀವನವನ್ನು ಸಂರಕ್ಷಿಸುತ್ತದೆ ಎಂಬುದನ್ನು ತಿಳಿಸಿದರು. ನಮ್ಮ ಜೀವನವು ಅರ್ಥಪೂರ್ಣವನ್ನಾಗಿ ಮಾರ್ಪಡಿಸುವಲ್ಲಿ ಸ್ವಾತಂತ್ರ್ಯದ ನಿಜವಾದ ಅರ್ಥ ಹಾಗು ಅದರ ಪಾತ್ರವೇನೆಂಬುದನ್ನು ತಿಳಿಸಿದರು. ಸಹಭಾಗಿಯೊಬ್ಬರ ತಾಯಿಯಾದ ಶ್ರೀಮತಿ ಶಶಿ ಯವರು ನಮ್ಮ ಮಿಷನ್ನಿನ ಕೆಲಸವನ್ನು ಕೊಂಡಾಡಿದರು. ಶಿಕ್ಷಕರಾದ ಶ್ರೀ ಅಲೋಕರವರು ಮಿಷನ್ನಿಗೆ ಧನ್ಯವಾದಗಳನ್ನರ್ಪಿಸಿದರು.

## ಆಸ್ಸಾಮ್

ವಿದ್ಯಾರ್ಥಿಗಳು, ಪಾಲಕರು ಹಾಗು ಶಿಕ್ಷಕರು ಕೂಡಿ ಒಟ್ಟು 84 ಜನರು ಉಪಸ್ಥಿತರಿದ್ದ ಗೌಹಾತಿಯಲ್ಲಿಯ ಸಮಾರಂಭವು, ಕೇಂದ್ರ ಪ್ರಮುಖರಾದ ಸೋ.ಪರಿಜಿತ್ ಫುಕ್ಕನರವರು ಮಿಷನ್ನಿನಬಗ್ಗೆ ಆಡಿದ ಮಾತುಗಳೊಂದಿಗೆ ಪ್ರಾರಂಭವಾಯಿತು. ಸೋ.ಸೇನ್ ಗುಪ್ತಾರವರು ಮನಸ್ಸಿನ ನಿಯಮನ ಹಾಗು ಹೃದಯದ ಮೇಲಿನ ಧ್ಯಾನದ ಮಹತ್ವಗಳಮೇಲೆ ಬೆಳಕು ಚೆಲ್ಲಿದರು. ಶ್ರೀ ರಾಮಚಂದ್ರ ಮಿಷನ್ ಮತ್ತು ಸಂಯುಕ್ತ ರಾಷ್ಟ್ರ ಸಂಘಗಳು ವಿಶ್ವಬಂಧುತ್ವದ ಉದ್ದೇಶಕ್ಕಾಗಿ ಒಂದಾಗಿದ್ದ ಬಗ್ಗೆ ಹಾಗು ಮೂಲ್ಯಾಧಾರಿತ ಶಿಕ್ಷಣದ ಚಟುವಟಿಕೆಗಳ ಬಗ್ಗೆ ವಿವರಣೆಯನ್ನಿತ್ತರು. ಇದು ವಿದ್ಯಾರ್ಥಿಗಳು, ಶಿಕ್ಷಕರು ಹಾಗು ಪಾಲಕರನ್ನು ಧ್ಯಾನ ಮತ್ತು ಅಧ್ಯಾತ್ಮದ ಬಗ್ಗೆ ಆಳವಾಗಿ ಚರ್ಚಿಸಲು ಪ್ರೇರೇಪಿಸಿತು. ಊಟದ ಸಮಯದಲ್ಲಿ ಅತಿಥಿಗಳಿಂದ ಸಾಕಷ್ಟು ಪ್ರಶ್ನೆಗಳು ಮೂಡಿದವು. ಪ್ರಶಿಕ್ಷಕರು ಮತ್ತು ಹಿರಿಯ ಅಭ್ಯಾಸಿಗಳು ಅವುಗಳಿಗೆ ಉತ್ತರವನ್ನಿತ್ತರು.

ತೀನಸುಖಿಯಾ ಆಶ್ರಮದಲ್ಲಿ ದಿ. 2 ನೇ ಫೆಬ್ರುವರಿಯಂದು ವಿದ್ಯಾರ್ಥಿಗಳು, ಶಿಕ್ಷಕರು, ಪ್ರಾಂಶುಪಾಲರು ಹಾಗೂ ಪಾಲಕರುಸೇರಿದಂತೆ ಒಟ್ಟು 60 ಜನರು ಸೇರಿದ್ದರು. ಕೇಂದ್ರ ಪ್ರಮುಖರಾದ ಸ. ಕೈಲಾಸ ಅಗ್ರವಾಲ್ ಮತ್ತು ಗೌಹಾತಿ ಕೇಂದ್ರದ ಅಶೋಕ ಸೇನಗುಪ್ತಾರವರು ನಮ್ಮ ಮಿಷನ್ ಹಾಗು ಇದರ ಜಾಗತಿಕ ಸ್ತರದಲ್ಲಿಯ ಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತ ವಿವರಣೆಗಳನ್ನು ಪ್ರಸ್ತುತ ಪಡಿಸಿದರು. ಅವರು ವಿದ್ಯಾರ್ಥಿ ಜೀವನದಲ್ಲಿ ಧ್ಯಾನದ ಮಹತ್ವದ ಬಗ್ಗೆ ಮತ್ತು ಕೆಲವು ಪ್ರಾತ್ಯಕ್ಷಿಕೆಗಳೊಂದಿಗೆ ವಿ.ಬಿ.ಎಸ್.ಇ.ಚಟುವಟಿಕೆಗಳ ಬಗ್ಗೆ ಕೊಟ್ಟ ವಿವರಣೆಗಳು ಶ್ರೋತೃಗಳನ್ನು ಪ್ರೋತ್ಸಾಹಿಸಿತು.

## ಪಶ್ಚಿಮ ಬಂಗಾಳ

ಕೊಲ್ಕತ್ತಾದ ಬಾಬೂಜೀ ಮೆಮೋರಿಯಲ್ ಆಶ್ರಮದಲ್ಲಿ, ದಿ. 23ನೇ ಜನವರಿಯಂದು ಸಮಾರಂಭವೊಂದನ್ನು ಹಮ್ಮಿಕೊಳ್ಳಲಾಗಿತ್ತು. ಇದು ಭೊವಾನಿಪುರ ಗುಜರಾತ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಪ್ರತಿಷ್ಠಿತ ಶಿಕ್ಷಣ ತಜ್ಞರೂ ಪರೋಪಕಾರಿಗಳೂ ಆದ ಶ್ರೀಯುತ ಮಂಗಲ ಸಾಂಘವಿಯವರು ಮುಖ್ಯ ಅತಿಥಿಯಾಗಿ ಹಾಗೂ ಟೈಮ್ಸ್ ಆಫ್ ಇಂಡಿಯಾದ ಸ್ಥಳೀಯ ಉಪ ಸಂಪಾದಕರಾದ ಶೀ ಕೇಶವ ಪ್ರಧಾನರು ಸನ್ಮಾನ್ಯ ಅತಿಥಿಗಳಾಗಿ ಈ ಕಾರ್ಯಕ್ರಮಕ್ಕೆ ಶೋಭೆಯನ್ನಿತ್ತರು.

ಈ ವರ್ಷ, ಈ ವಲಯದಲ್ಲಿಯ ಸುಮಾರು 40 ಸಂಸ್ಥೆಗಳು ಪಾಲ್ಗೊಂಡಿದ್ದವು. ಅದಲ್ಲದೆ ದಾರ್ಜಿಲಿಂಗ್, ಸಿಲಿಗುರಿ ಮತ್ತು ರಾನಿಗಂಜ್‌ದಲ್ಲಿಯ ಶಾಲೆಗಳೂ ಸಹ ಸೇರಿಕೊಂಡಿದ್ದವು.

50 ಕ್ಕೂ ಹೆಚ್ಚಿನ ವಿಜೇತರು, 80 ಪಾಲಕರು ಸೇರಿದ ಈ ಸಮಾರಂಭವು, ಮುಖ್ಯ ಅತಿಥಿಗಳಾದ ಕೇಶವ ಪ್ರಧಾನರವರ ವಿಚಾರವನ್ನುದ್ಯುಕ್ತಗೊಳಿಸುವ ಭಾಷಣದಿಂದ ಆನಂದಮಯವಾಗಿತ್ತು. ತದನಂತರ ಸೋ.ರಿಷಭ್ ಕೊಠಾರಿಯವರು ಎಸ್.ಆರ್.ಸಿ.ಎಂ ಮತ್ತು ಸಂ.ರಾಷ್ಟ್ರಗಳ ಜೊತೆಗೂಡುವಿಕೆ ಮತ್ತು ಅವುಗಳ ಸಾಮಾನ್ಯ ಗುರಿಯನ್ನು ಸಾಧಿಸುವಲ್ಲಿ ಎರಡೂ ಸಂಸ್ಥೆಗಳ ಸಹಭಾಗದ ಬಗ್ಗೆ ಕೆಲವು ಮಾತುಗಳನ್ನು ಹೇಳಿದರು.

ರಾಷ್ಟೀಯ ಮಟ್ಟದ ಎರಡು ಬಹುಮಾನಗಳನ್ನು ಪಡೆದ ಲಾರೆಟೋ ಹೌಸ್‌ನ ಹುಯಿಶಾ ಗನೇರಿವಾಲ್(ಪ್ರಥಮ ವಿಭಾಗದ ಪ್ರಥಮಸ್ಥಾನ) ಮತ್ತು ಇಪ್ಸಿತಾ ದಾಸಗುಪ್ತಾ(ಎರಡನೇಯ ವಿಭಾಗದ ಎರಡನೇಯ ಸ್ಥಾನ) ಇವರು ಕೊಲ್ಕತ್ತಾದವರೇ ಆಗಿದ್ದುದು ವಲಯಕ್ಕೆ ಹೆಮ್ಮೆಯ ಮಾತಾಗಿದೆ. ಎಲ್ಲಾ ವಿಜೇತರಿಗೆ ಪ್ರಶಸ್ತಿಪತ್ರಗಳೊಂದಿಗೆ 'ಯುಥ್– ಎ ಟೈಮ್ ಆಫ್ ಪ್ರಾಮಿಸ್ ಆಂಡ್ ಎಫರ್ಟ್ಸ್' ಎಂಬ ಪುಸ್ತಕದ ಪ್ರತಿಯೊಂದನ್ನೂ ವಿತರಿಸಲಾಯಿತು.

ಆಶ್ರಮದ ಪವಿತ್ರ ಹಾಗು ಪ್ರಸನ್ನ ವಾತಾವರಣವು ಇಲ್ಲಿ ಸೇರಿದ ಜನರನ್ನು ಅಂತರ್ಮುಖಿಯನ್ನಾಗಿಸಿ ಮಿಷನ್ನಿನಬಗ್ಗೆ ಮತ್ತು ಇದರ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಲು ಉತ್ಸುಕರನ್ನಾಗಿಸಿತು. ಬಹಳಷ್ಟು ಜನರು ಪುಸ್ತಕಗಳ ಸ್ಟಾಲ್‌ಗಳ ಕಡೆಗೆ ಧಾವಿಸಿ ಅಲ್ಲಿನ ಸಾಹಿತ್ಯಗಳಲ್ಲಿ ಕಣ್ಣಾಡಿಸಿದರು ಹಾಗೂ ಸಾಧನೆಯ ಬಗ್ಗೆ ವಿಚಾರಿಸಿದರು.

ಬಹುಮಾನ ವಿತರಣೆಯ ಕಾರ್ಯಕ್ರಮವು ವಿದ್ಯಾರ್ಥಿಗಳನ್ನು ಹಾಗೂ ಅವರ ಕುಟುಂಬದವರನ್ನು ತಲುಪುವ ಒಂದು ಪುಟ್ಟ ಪ್ರಯತ್ನವಾಗಿದ್ದು, ಇಲ್ಲಿಂದ ಕೇವಲ ಬಹುಮಾನಗಳನ್ನು ತೆಗೆದುಕೊಂಡು, ಪ್ರಶಂಸಿಸಿ ಹೋಗುವುದಲ್ಲದೆ ಇನ್ನೂ ಹೆಚ್ಚಿನದೇನಾದರೂ ಕೊಂಡೊಯ್ಯಲೆಂಬ ಆಶಯವಾಗಿದೆ. ಒಂದು ವೇಳೆ ಅವರ ಅರಳಿದ ಮುಖಗಳು ಇದರ ಸಂಕೇತ ವನ್ನೇನಾದರೂ ಇತ್ತರೆ ಅವರ ಹೃದಯದ ಅಂತರಾಳದ ತಂತಿಯನ್ನು ಮಿಡಿದಂತೆಯೇ ಸರಿ.

ಸಂಪುಟ 4 ಸಂಚಿಕೆ 2
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ
ಮಾರ್ಚ್ 2011

# ಪ್ರಭಾ ಕೇಂದ್ರಗಳು

## ಜೈಪುರ ವಲಯಾಶ್ರಮ





ಈ ವಲಯಾಶ್ರಮವು ಐತಿಹಾಸಿಕ ರಾಜ್ಯವಾದ ರಾಜಸ್ಥಾನದ ರಾಜಧಾನಿಯಲ್ಲಿದ್ದು, ಜೈಪುರ–ಅಜಮೇರ ರಾಜಮಾರ್ಗದಲ್ಲಿದೆ. ಇದು ಪಟ್ಟಣದ ಕೇಂದ್ರಸ್ಥಾನದಿಂದ 19 ಕಿ.ಮೀ. ಮತ್ತು ವಿಮಾನನಿಲ್ದಾಣದಿಂದ 23 ಕಿ.ಮೀ. ಅಂತರದಲ್ಲಿದೆ. ಇದು 10 ಎಕರೆ ಜಮೀನನ್ನು ಆವರಿಸಿದ್ದು, ಇದನ್ನು 2002ರಲ್ಲಿ ಕೊಳ್ಳಲಾಗಿದೆ ಮತ್ತು 21 ಎಕರೆ ಜಮೀನನ್ನು ಹೊಂದಿದ "ಮಾಸ್ಟರ್ ಕ್ರಿಯೇಶನ್" ಎಂದು ಹೆಸರಿಸಲ್ಪಟ್ಟ ಅಭ್ಯಾಸಿಗಳ ವಸಾಹತಿನ ಮಗ್ಗುಲಲ್ಲಿದೆ.

ದಿ. 27 ನೇ ಅಕ್ಟೋಬರ್ 2002ರಂದು ಸದ್ಗುರುಗಳು ಈ ಜಾಗಕ್ಕೆ ಭೇಟಿಯಿತ್ತಾಗ ಬಿದಿರಿನಿಂದ ಕಟ್ಟಲ್ಪಟ್ಟ ಧ್ಯಾನಮಂದಿರ, ಪಾಕಶಾಲೆ, ಕಾರ್ಯಾಲಯ ಹಾಗು ಗುರುಗಳ ನಿವಾಸಸ್ಥಾನಗಳಿದ್ದವು. ಅವರು ತಮ್ಮ ಆಗಾಗಿನ ಭೇಟಿಗಳಲ್ಲಿ ಆಶ್ರಮ ಹಾಗು ವಸಾಹತುಗಳ ನಿರ್ಮಾಣದ ಯೋಜನೆಗಳು ಕಾರ್ಯರೂಪಕ್ಕೆ ತರಲು ಸಹಾಯ ನೀಡಿದರು. ಅವರ ನಿರ್ದೇಶನದ ಮೇರೆಗೆ ಆಶ್ರಮ ಕಟ್ಟಡವನ್ನು ರಾಜಸ್ಥಾನಿ ಶಿಲ್ಪಕಲೆಗೆ ಅನುಗುಣವಾಗಿ ಕಟ್ಟಲಾಗಿದೆ.



ದಿ.17 ನೇ ಮೇ 2009ರಂದು ಶಿಲಾನ್ಯಾಸ ಮಾಡಿದ ನಂತರ ಅಭ್ಯಾಸಿಬಂಧುಗಳ ಚೈತನ್ಯಮಯ ಸಹಭಾಗದಿಂದ ಕೇವಲ 15 ತಿಂಗಳ ಕಾಲಾವಧಿಯಲ್ಲಿ ಕಟ್ಟಡದ ನಿರ್ಮಾಣ ಪೂರ್ಣಗೊಳಿಸಲಾಯಿತು. ದಿ. 30 ಜುಲೈ 2010ರಂದು ಗುರುಗಳು ಈ ವಲಯಾಶ್ರಮವನ್ನು ರಾಜಸ್ಥಾನ ಹಾಗೂ ನೆರೆಯ ರಾಜ್ಯದ ಅಭ್ಯಾಸಿಗಳ ಉಪಸ್ಥಿತಿಯಲ್ಲಿ ತಮ್ಮ ಗುರುಗಳಾದ ಪೂಜ್ಯ ಬಾಬೂಜೀ ಮಹಾರಾಜರಿಗೆ ಸಮರ್ಪಿಸಿದರು. ತಮ್ಮ ಮರುದಿನದ ಭಾಷಣದಲ್ಲಿ ರಾಜಸ್ಥಾನವು ತಮ್ಮ ಅಚ್ಚುಮೆಚ್ಚಿನ ಸ್ಥಾನಗಳಲ್ಲೊಂದಾಗಿದೆ ಎಂದು ಹೇಳಿದರು. ಸಮರ್ಪಣೆಯ ಭಾವನೆ ಇದ್ದರೆ ಪ್ರಕೃತಿಯ ಸಂಪೂರ್ಣ ಕೃಪೆಯು ನಮ್ಮೊಟ್ಟಿಗೆ ಇರುತ್ತದೆ ಎಂಬುದನ್ನು ಪ್ರಕಟಪಡಿಸಿದರು.



ಆಶ್ರಮವು 10,000 ಚ.ಅಡಿಯ ಧ್ಯಾನಮಂದಿರ, 6300 ಚ.ಅಡಿಗಳ ಗುರುಗಳ ಕಾರ್ಯಾಲಯ ಹೊಂದಿದ ಸುಯೋಜಿತ ಕಟ್ಟಡವಾಗಿದೆ. ಸಾಮೂಹಿಕ ವಸತಿಯು 300 ಕ್ಕೂ ಹೆಚ್ಚಿನ ಅಭ್ಯಾಸಿಗಳಿಗಾಗಿ ಅನುಕೂಲವಾಗುವಂತಿದೆ. ಆಶ್ರಮದ ಕಾರ್ಯಾಲಯಗಳು ತಳಮಜಲಿನಲ್ಲಿವೆ. ಸಂಪೂರ್ಣ ಆಶ್ರಮವು ವಿವಿಧ ಪ್ರಕಾರದ ಗಿಡ ಮರಗಳಿಂದ ಕೂಡಿದ್ದು ರಮಣೀಯವಾಗಿ ಕಲ್ಪಿಸಲಾಗಿದೆ.

ಆಶ್ರಮದ ಶಾಂತಿಯುತ ಹಾಗೂ ದೈವಿಕ ವಾತಾವರಣವು ಅಭ್ಯಾಸಿಗಳನ್ನು ಚುರುಕುಗೊಳಿಸುತ್ತದೆ. ಅನೇಕ ತರಬೇತು ಕಾರ್ಯಕ್ರಮಗಳು, ವಿಬಿಎಸ್ಇ ಚಟುವಟಿಕೆಗಳು, ಪ್ರಬಂಧ ಸ್ಪರ್ಧೆ, ಮಕ್ಕಳ ಮತ್ತು ತರುಣರಿಗಾಗಿ ಅನೇಕ ಚಟುವಟಿಕೆಗಳು, ಮುಕ್ತ ಸಭೆಗಳು ಮತ್ತು ಸಮೂಹ ಚರ್ಚೆಗಳನ್ನು ವರ್ಷದಾದ್ಯಂತ ನಡೆಸಲಾಗುತ್ತದೆ.



ಈ ಪ್ರಭಾಕೇಂದ್ರವು ಅಭ್ಯಾಸಿಗಳು ಮಿಷನ್ನಿಗಾಗಿ ಕಾರ್ಯನಿರತರಾಗಲು ಮತ್ತು ಗುರುಗಳು ನಮ್ಮನ್ನು ಕಾಣಬಯಸುವಂತೆ ಪ್ರಗತಿ ಹೊಂದಲು ಅವಕಾಶ ನೀಡುತ್ತಿರುವುದಕ್ಕೆ ಗುರುಗಳ ಅನುಗ್ರಹವೇ ಕಾರಣ.






**To download or subscribe to this newsletter, please visit [http://www.sahajmarg.org/newsletter/india](http://www.sahajmarg.org/newsletter/india) For feedback, suggestions and news articles please send email to in.newsletter@srcm.org**

© 2011 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.